بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 05

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

01 ಫೆಬ್ರವರಿ 2024, 01 ತಬ್ಲೀಗ್ 1403 ಹಿಜರಿ ಶಮ್ಸಿ,
20 ರಜಬ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاعْلَمُوْٓا اَنَّمَآ اَمْوَالُكُمْ
وَاَوْلَادُكُمْ فِتْنَةٌ ۙ
وَّاَنَّ اللّٰهَ عِنْدَهٗٓ اَجْرٌ عَظِيْمٌ

(ಅಲ್ ಅನ್‌ಫಾಲ್: 29)

ಅಂದರೆ: ಖಂಡಿತವಾಗಿಯೂ ನಿಮ್ಮ ಸಂಪತ್ತು ಮತ್ತು ನಿಮ್ಮ ಸಂತಾನ ನಿಮಗೊಂದು ಪರೀಕ್ಷೆಯೆಂದೂ ಅಲ್ಲಾಹನ ಬಳಿಯಲ್ಲೇ ಅತಿ ದೊಡ್ಡ ಪ್ರತಿಫಲವಿದೆಯೆಂದೂ ತಿಳಿದುಕೊಳ್ಳಿರಿ.

# ಅಹ್ಮದಿಯಾ ಜಮಾಅತಿನ ಕೇಂದ್ರ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ 128ನೇ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಅನುಗ್ರಹಪೂರ್ಣವಾದ ಯಶಸ್ವಿ ಆಯೋಜನೆ.

ಈ ಕಾಲಘಟ್ಟವು ವಾಗ್ದತ್ತ ಮಸೀಹನ ಆಗಮನದ ಕಾಲವಾಗಿದೆ. ಹಝ್ರತ್ ಅಖದಸ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ) ಅವರೇ ಆ ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹದಿ ಆಗಿದ್ದಾರೆ. ಅವರ ಬರುವಿಕೆಯ ಭವಿಷ್ಯವಾಣಿಗಳು ಪವಿತ್ರ ಖುರ್‌ಆನ್‌ನ ಮತ್ತು ಹಝ್ರತ್ ಅಖದಸ್ ಮುಹಮ್ಮದ್ ಮುಸ್ತಫಾ(ಸ) ರವರು ನುಡಿದಿದ್ದರು.

ಎಲ್ಲಾ ದೇಶಗಳಲ್ಲಿ ಸಮ್ಮೇಳನಗಳ ನಿಯೋಜನೆ ಹಝ್ರತ್ ಮಸೀಹ್ ಮೌಊದ್(ಅ) ಅವರ ಹೆಸರು ಗೌರವ ಪಡೆದಿದ್ದು, ಅವರ(ಅ) ಪರವಾಗಿ ಮೂಡುವ ಘೋಷಣೆಗಳು ಇವೆಲ್ಲಾ ಅಲ್ಲಾಹನ ವಾಗ್ದಾನಗಳ ಪ್ರಕಾರವೇ ಆಗಿವೆ. ಅವರೆ ಆ ವಾಗ್ದತ್ತ ಮಸೀಹ್ ಆಗಿದ್ದಾರೆ, ಅದು ಅಲ್ಲಾಹನ ವಾಗ್ದಾನ ಪ್ರಕಾರ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಗಳ ಪ್ರಕಾರ ಅವರ(ಸ) ರವರ ಸೇವಕರಾಗಿ ಬಂದಿರುತ್ತಾರೆ.

ಖಾದಿಯಾನ್ ಗ್ರಾಮವು ನೂರು ನೂರ ಇಪ್ಪತ್ತೈದು ವರ್ಷಗಳ ಮುಂಚೆಯಿಂದ ಒಂದು ಸಾಧಾರಣ ಗ್ರಾಮವೇ ಆಗಿತ್ತು. ಅದೀಗ ಒಂದು ಸುಂದರ ನಗರದಂತೆ ಸುಸಜ್ಜಿತವಾಗಿದೆ. ಪ್ರಪಂಚದ ಮೂಲೆ ಮೂಲೆಯವರೆಗೆ ಅದು ಖ್ಯಾತಿ ಪಡೆದಿದೆ. ಈ ಖ್ಯಾತಿ ಹಝ್ರತ್ ಮಸೀಹ್ ಮೌಊದ್(ಅ) ರವರ ಹೆಸರಿನಿಂದಾಗಿದೆ, ಅವರು(ಅ) ಪಡೆದ ಅಲ್ಲಾಹನ ವಾಗ್ದಾನಗಳ ಕಾರಣದಿಂದಾಗಿ, ಇಂದು ಈ ಗ್ರಾಮದಲ್ಲಿ ಪ್ರಪಂಚದ ಹಲವು ನಿವಾಸಿಗಳು ಈ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ದಲ್ಲಿ ಭಾಗವಹಿಸಲು ಬಂದಿರುತ್ತಾರೆ.

ಮುಸಲ್ಮಾನರಿಗೆ ಇದು ಸಂತೋಷಪಡುವ ವಿಷಯವಾಗಿದೆ. ಆಗಮಿಸಬೇಕಾದ ಅ ಇಮಾಮ್ ಮಹದಿ, ವಾಗ್ದತ್ತ ಮಸೀಹ್ ಅವರಾಗಿದ್ದಾರೆ, ಅವರ ಆಗಮನದಿಂದ ಇಸ್ಲಾಮಿನ ಪುನರುತ್ಥಾನದ ಹೊಸ ಯುಗ ಪ್ರಾರಂಭವಾಗಿದೆ. ತಮ್ಮ ದೌರ್ಬಲ್ಯತೆಗಳನ್ನು ಹೋಗಲಾಡಿಸಿಕೊಳ್ಳುವ ಕಾಲ ಬಂದಿದೆ ಮತ್ತು ಇಸ್ಲಾಮಿನ ಪ್ರಚಾರ ಹಾಗೂ ಪ್ರಕಾಶದ ಕಾಲ ಬಂದಿದೆ, ಆದರೆ ನಾಮಧಾರಿ ಉಲಮಾಅಗಳ ಸ್ವಾರ್ಥ ಹಿತಾಸಕ್ತಿಯಿಂದ ಮುಸ್ಲಿಮ್ ಜನಾಂಗವನ್ನು ತಪ್ಪು ದಾರಿಗೆ ಎಳೆಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದು ಕೂಡ ಅಲ್ಲಾಹನ ವಾಗ್ದಾನವಿದೆ. ಒಂದು ಸಮಯ ಬರುವುದು ಅಂತಿಮವಾಗಿ ಅವರು ಮನ್ನಿಸುವರು.

**MTA International ಮೂಲಕ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ(ಅಬಿಅ) ರ ಇಸ್ಲಾಮಾಬಾದ್, ಯು.ಕೆ ಯಿಂದ ಜಲ್ಸದಲ್ಲಿ ಉಪಸ್ಥಿತರಿದ್ದವರೊಂದಿಗೆ ಸಂಬೋಧಿಸಿ ಮಾತನಾಡಿರುವ ಸಮಾರೋಪ ಸಮಾರಂಭ.**

* ಮೂರು ದಿನಗಳ ಕಾಲ ಜಲ್ಸಾ ಕಾರ್ಯಕ್ರಮಗಳ ಲೈವ್ ಸ್ಟ್ರೀಮಿಂಗ್ ಮತ್ತು ಅದರ ಮೂಲಕ ದೇಶದ ಹೊರಗೆ ಒಳಗೆ ವ್ಯಾಪಕ ಬಳಕೆ. * ಲೈವ್ ಸ್ಟ್ರೀಮಿಂಗ್ ಮೂಲಕ ಒಂದು ಲಕ್ಷದ ಹದಿನಾರು ಸಾವಿರದ ನಾನೂರು ಜನರು ಜಲ್ಸಾ ಪ್ರಕ್ರಿಯೆಗಳನ್ನು ವೀಕ್ಷಿಸಿದರು ಮತ್ತು ಆಲಿಸಿದರು. * 14930 ಅಹ್ಮದಿಯ ಬಂಧುಗಳ ಜಲ್ಸದಲ್ಲಿ ಭಾಗವಹಿಸುವಿಕೆ * 42 ದೇಶಗಳ ಪ್ರತಿನಿಧಿತ್ವ, * ಕೆಲವು ಆಫ್ರಿಕನ್ ದೇಶಗಳ ಜಲ್ಸದಲ್ಲಿ ಅವರ ಭಾಗವಹಿಸುವಿಕೆ ಮತ್ತು ಸಮಾರೋಪ ಭಾಷಣದಲ್ಲಿ ಇಸ್ಲಾಮಾಬಾದ್ ಯು.ಕೆ ಜಮಾಅತ್‌ನ ಸ್ನೇಹಿತರ ಸಭೆ, * ನಮಾಝೆ ತಹಜ್ಜುದ್. * ದರ್ಸುಲ್ ಖುರ್‌ಆನ್ ಮತ್ತು ಅಲ್ಲಾಹನ ಸ್ಮರಣೆಯ ವಾತಾವರಣ, * ಉಲಮಾಗಳ ಭಾಷಣಗಳು, * ಪೂರ್ಣ 9 ಭಾಷೆಗಳಲ್ಲಿ ಕಾರ್ಯಕ್ರಮಗಳ ಅನುವಾದ, * ಜಮಾಅತ್ ಬಾಂಧವರ ಜ್ಞಾನವನ್ನು ಹೆಚ್ಚಿಸಲು ತರಬೇತಿ ಸಮಸ್ಯೆಗಳನ್ನು ಒಳಗೊಂಡ ಸಾಕ್ಷ್ಯ ಚಿತ್ರಗಳು ಮತ್ತು ವಿವಿಧ ಮಾಹಿತಿ ಪ್ರದರ್ಶನಗಳ ಸಂಘಟನೆ, * ನಿಕಾಹ್‌ಗಳ ಘೋಷಣೆಗಳು, * ಪ್ರಿಂಟ್ ಮಾಧ್ಯಮ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳಿಂದ ಜಲ್ಸದ ಪ್ರಚಾರ, * ಶಾಂತಿಯುತ ಮತ್ತು ಅಹ್ಲಾದಕರ ವಾತಾವರಣದಲ್ಲಿ ಜಲ್ಸದ ಎಲ್ಲಾ ಪ್ರಕ್ರಿಯೆಗಳು ಮುಕ್ತಾಯಗೊಂಡವು. **(ಮನ್ಸೂರ್ ಅಹ್ಮದ್ ಮಸ್ರೂರ್, ವರದಿಗಾರರು).**

ಅಲ್‌ಹಮ್ದುಲಿಲ್ಲಾಹ್! ಜಲ್ಸ ಸಾಲಾನ ಖಾದಿಯಾನ್, ಬುಸ್ತಾನ್ ಅಹ್ಮದ್‌ನ ವಿಶಾಲವಾದ ಜಾಗದಲ್ಲಿ ದಿನಾಂಕ 29, 30, 31 ಡಿಸೆಂಬರ್ 2023 ಶುಕ್ರವಾರ, ಶನಿವಾರ, ರವಿವಾರ ಆಯೋಜನೆಗೊಂಡು ಶಾಂತಿ ಸುವ್ಯವಸ್ಥಿತವಾಗಿ ನಡೆದು ಮುಕ್ತಾಯಗೊಂಡಿತು. ದೇಶದ ಮೂಲೆ ಮೂಲೆಯಿಂದ ಅಹ್ಮದಿಯತ್ತಿನ ಪ್ರೇಮಿಗಳು ತುಂಬುತ್ಸಾಹದಿಂದ ಜಲ್ಸದಲ್ಲಿ ಭಾಗವಹಿಸಲು ಬರತೊಡಗಿದರು. ಜಲ್ಸದ ದಿನಗಳು ಸಮೀಪ ಬರುತ್ತಿದ್ದಂತೆ ಖಾದಿಯಾನ್ ದಾರುಲ್ ಅಮನ್‌ನ ಸೌಂದರ್ಯ ಹೆಚ್ಚುತ್ತಾ ಹೋಗುತ್ತಿತ್ತು. ಹೀಗೆ ಅಂತಿಮವಗಿ ಖಾದಿಯಾನ್ ಅತಿಥಿಗಳಿಂದ ತುಂಬಿ ಹೋಯಿತು. ಎಲ್ಲಿ ನೋಡಿದರೂ, ಎಲ್ಲಿ ಹೋದರೂ ಹಝ್ರತ್ ಮಸೀಹ್ ಮೌಊದ್(ಅ) ಅವರ ಅತಿಥಿಗಳೇ ಕಾಣುತ್ತಿದ್ದವು. ವಿದೇಶಗಳಿಂದಲೂ ದೊಡ್ಡ ಸಂಖ್ಯೆಯಲ್ಲಿ ಅಹ್ಮದಿಯಾ ಪ್ರೇಮಿಗಳು ಭಾಗವಹಿಸಿದ್ದರು. ಖಾದಿಯಾನ್ ದಾರುಲ್ ಅಮಾನ್ ಎಂಬ ಪ್ರಿಯ ಗ್ರಾಮವು ಮತ್ತೊಮ್ಮೆ ಸಂತೋಷ ಹಾಗೂ ಸಂಭ್ರಮದಿಂದ ಕೂಡಿತ್ತು. ಅತಿಥಿಗಳ ಆಗಮನಕ್ಕಿಂತ ಮುಂಚಿತವಾಗಿಯೇ ವಿಧ್ಯುತ್ ವಿಭಾಗದಿಂದ ಮೊಹಲ್ಲದ ಎಲ್ಲಾ ಬೀದಿಗಳಲ್ಲಿ ಮತ್ತು ರಸ್ತೆಗಳಲ್ಲಿ ಖಿಣಭಜ ಖಝಣ ಗಳಿಂದ ಬೆಳಗಿಸಲಾಗಿತ್ತು. ಬಿಹಿಷ್ತಿ ಮಖ್ಬರ, ದಾರುಲ್ ಮಸೀಹ್, ಮಸ್ಜಿದ್ ಮುಬಾರಕ್, ಮಸ್ಜಿದ್ ಅಖ್ಸಾ, ಮತ್ತು ಮಿನಾರತುಲ್ ಮಸೀಹ್ ಅನ್ನು ಸಣ್ಣ ಸಣ್ಣ ಮತ್ತು ಬಣ್ಬಣ್ಣ ಬಣ್ಣದ ವಿಧ್ಯುತ್ ಬಲ್ಬ್‌ಗಳಿಂದ ಮದುಮಗಳಂತೆ ಶೃಂಗರಿಸಲಾಗಿತ್ತು. ಹೀಗೆ ಮಸೀಹ್ ಮೌಊದ್, ಮಹದಿ ಮೌಊದ್(ಅ)ರ ಈ ಆಧ್ಯಾತ್ಮಿಕ ಗ್ರಮ ತನ್ನ ಅಂತರಂಗದ ಪ್ರಕಾಶವಲ್ಲದೆ ಬಹಿರಂಗವಾಗಿಯೂ

ಪ್ರಕಾಶಮಯವಾಗಿತ್ತು.

ಜಲ್ಸ ಸಾಲಾನದ ಕಾರ್ಯಕರ್ತರ ಮತ್ತು ಜಲ್ಸ ವ್ಯವಸ್ಥೆಯ ವೀಕ್ಷಣೆ

ದಿನಾಂಕ 25 ಡಿಸೆಂಬರ್ 2023 ಸೋಮವಾರದಂದು ಹತ್ತೂವರೆ ಗಂಟೆಗೆ ಸರಿಯಾಗಿ ಜಲ್ಸದ ಸ್ಥಳವಾದ ಬುಸ್ತಾನೆ ಅಹ್ಮದ್‌ನಲ್ಲಿ ಹುಝೂರೆ ಅನ್ವರ್(ಅಬಿಅ) ರವರ ಪ್ರತಿನಿಧಿಯಾಗಿ ಮುಕರ್ರಮ್ ಮುಹಮ್ಮದ್ ಕರೀಮುದ್ದೀನ್ ಶಾಹಿದ್ ಸಾಹಿಬ್, ಅಧ್ಯಕ್ಷರು ಸದರ್ ಅಂಜುಮನ್ ಅಹ್ಮದಿಯಾ ಅವರ ಅಧ್ಯಕ್ಷತೆಯಲ್ಲಿ ಜಲ್ಸ ಕಾರ್ಯಕರ್ತರ ಮತ್ತು ಜಲ್ಸ ವ್ಯವಸ್ಥೆಗಳ ಕುರಿತು ಪರಾಮರ್ಶಿಸಲಾಯಿತು. ಹುಝೂರೆ ಅನ್ವರ್(ಅಬಿಅ) ಅವರ ಪ್ರತಿನಿಧಿ ಆಗಮಿಸುತ್ತಿದ್ದಂತೆಯೇ ಅವರಿಗೆ ಅಹಲನ್ ವ ಸಹಲನ್ ವ ಮರ್‌ಹಬ ಎಂಬ ಉಚ್ಚಾರಣೆಯೊಂದಿಗೆ ಸ್ವಾಗತಿಸಲಾಯಿತು. ಅವರು ಪ್ರಪ್ರಥಮವಾಗಿ ಜಲ್ಸ ಸಾಲಾನದ ವಿಭಾಗಗಳ ಬ್ಯಾನರ್ ಅಡಿಯಲ್ಲಿ ನಿಂತಿರುವ ವ್ಯವಸ್ಥಾಪಕರು, ಕಾವಲುಗಾರರು ಮತ್ತು ಕಾರ್ಯಕರ್ತರೊಡನೆ ಭೇಟಿಯಾದರು. ನಂತರ ಹುಝೂರೆ ಅನ್ವರ್(ಅಬಿಅ) ಅವರ ಪ್ರತಿನಿಧಿಗಳು ಮಹಿಳೆಯರ ಪೆಂಡಾಲುಗಳಲ್ಲಿ ಆಗಮಿಸಿದರು.

ಕಾರ್ಯಕ್ರಮದ ಪ್ರಕ್ರಿಯೆಗಳು ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಪ್ರಾರಂಭವಾಯಿತು. ಅದನ್ನು ಮುಕರ್ರಮ್ ತಖಿ ಅಹ್ಮದ್ ಸಃಆಇಬ್ ಜಾಮಿಯಾ ಅಹ್ಮದಿಯಾ ಖಾದಿಯಾನಿನ ವಿದ್ಯಾರ್ಥಿ ನೆರವೇರಿಸಿಕೊಟ್ಟರು. ನಂತರ ಹುಝೂರೆ ಅನ್ವರ್(ಅಬಿಅ) ಅವರ ಪ್ರತಿನಿಧಿಗಳು ಸಂಬೋಧಿಸಿದರು. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಸಹಾಬರವರ ಮಾದರಿಯನ್ನು ಅನುಸರಿಸಲು ಸಲಹೆ ನೀಡಿದರು. ಹುಝೂರೆ ಅನ್ವರ್(ಅಬಿಅ) ರವರ ಬೋಧನೆಗಳನ್ವಯ ಎಲ್ಲಾ ಕಾರ್ಯಕರ್ತರಿಗೆ ಹಿತಕರವಾದ ಉಪದೇಶವನ್ನು ನೀಡಿದರು. ಕೊನೆಯಲ್ಲಿ ಜಲ್ಸ ಸಾಲಾನ ಎಲ್ಲ ರೀತಿಯಿಂದಲೂ ಶಾಂತಿಯಿಂದಲೂ ಅನುಗ್ರಹ ಪೂರ್ಣವಾಗಿಯೂ ಕೊನೆಗೊಳ್ಳಲು ದುಆ ಮಾಡಿಸಿದರು. ಅಲ್‌ಹಮ್ದುಲಿಲ್ಲಾಹ್ ಅಲಾ ಝಾಲಿಕ್.

ದಿನಾಂಕ: 29 ಡಿಸೆಂಬರ್ 2023 ಶುಕ್ರವಾರ ಉದ್ಘಾಟನಾ ಅಧಿವೇಶನ

ಅಲ್ಲಾಹನ ಅಪಾರವಾದ ಅನುಗ್ರಹದಿಂದಾಗಿ ದಿನಾಂಕ 29 ಡಿಸೆಂಬರ್ 2023 ಶುಭ ಶುಕ್ರವರದಂದು ಜಲ್ಸ ಸಲಾನ ಖಾದಿಯಾನ್, ಮುಕ್ರಮ್ ಮೌಲಾನ ಮುಹಮ್ಮದ್ ಕರೀಮುದ್ದೀನ್ ಶಾಹಿದ್ ಸಾಹಿಬ್ ಪ್ರತಿನಿಧಿ ಹುಝೂರೆ ಅನ್ವರ್(ಅಬಿಅ) ಸದರ್, ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಅವರ ಅಧ್ಯಕ್ಷತೆಯಲ್ಲಿ ಪೂರ್ಣ ವೈಭವದೊಂದಿಗೆ ತನ್ನ ಜಮಾಅತಿನ ಸಂಪ್ರದಾಯದಂತೆ 10 ಗಂಟೆ 4 ನಿಮಿಷಕ್ಕೆ ಸರಿಯಾಗಿ ಪ್ರಾರಂಭಗೊಂಡಿತು. ಪ್ರತಿನಿಧಿ ಹುಝೂರೆ ಅನ್ವರ್(ಅಬಿಅ) ಅವರು 10 ಗಂಟೆ 4 ನಿಮಿಷಕ್ಕೆ ಸರಿಯಾಗಿ ಅಹ್ಮದಿಯಾ ಧ್ವಜ ಆರೋಹಣ ಮಾಡಿದರು. ತದನಂತರ ಪ್ರಾರ್ಥನೆ ಮಾಡಿಸಿದರು. ಜಲ್ಸ ಸಾಲಾನದ ಖಾದಿಯಾನ್ 2023 ರ ಮೊದಲ ದಿನದ ಮೊದಲ ಅಧಿವೇಶನದ ಆರಂಭ ಪವಿತ್ರ ಖುರ್‌ಆನ್‌ನ ಪಠಣದಿಂದಾಯಿತು. ಮುಕರ್ರಮ್ ಮುರ್‌ಶಿದ್ ಅಹ್ಮದ್ ಡಾರ್ ಸಾಹಿಬ್, ಜಾಮಿಯಾ ಅಹ್ಮದಿಯಾ ಖಾದಿಯಾನ್‌ನ ಅಧ್ಯಾಪಕರು ಸೂರೆ ಆಲಿ ಇಮ್ರಾನ್ ಅಧ್ಯಾಯದ ವಚನ 191 ರಿಂದ 195 ವಚನವನ್ನು ಪಠಿಸಿದರು. ಈ ವಚನಗಳ ಉರ್ದು ಅನುವಾದ ತಫ್ಸೀರ್ ಸಗೀರ್‌ನಿಂದ ಮುಕರ್ರಮ್ ಝೈನುದ್ದೀನ್ ಹಾಮಿದ್ ಸಾಹಿಬ್ ನಾಝಿಮ್ ದಾರುಲ್ ಖಝಾ ಖಾದಿಯಾನ್ ಪ್ರಸ್ತುತಪಡಿಸಿದರು. ನಂತರ ಸಭಾಧ್ಯಕ್ಷರು ಉದ್ಘಾಟನಾ ಭಾಷಣ ಮಾಡಿದರು. ಅವರು ಜಲ್ಸ ಸಾಲಾನ ಖಾದಿಯಾನ್‌ಗೆ ಆಗಮಿಸಿದ ಎಲ್ಲಾ ಉಪಸ್ಥಿತರಿಗೆ ಶುಭ ಕೋರಿದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಅಧ್ಯಾಪನೆಗಳ ಮೂಲಕ ಜಲ್ಸದಲ್ಲಿ ಭಾಗವಹಿಸಿದವರಿಗೆ ಉಪದೇಶ ನೀಡಿದರು. ಕೊನೆಯಲ್ಲಿ ಅವರು ಸಾಮೂಹಿಕ ಪ್ರಾರ್ಥನೆ ನೇರವೇರಿಸಿದರು.

ಮೊದಲ ದಿನ ಮೊದಲ ಅಧಿವೇಶನ

ತದನಂತರ ಮುಕರ್ರಮ್ ತನ್ವೀರ್ ಅಹ್ಮದ್ ನಾಸಿರ್ ಸಾಹಿಬ್, ನಾಯಿಬ್ ನಾಝಿರ್ ನಶ್ರ್ ವ ಇಶಾಅತ್ ಖಾದಿಯಾನ್ ಹಝ್ರತ್ ಮುಸ್ಲಿಹ್ ಮೌಊದ್ ಅವರ ಕವನ ಸಂಕಲನದಿಂದ "ಖುದಾ ಸೇ ಚಾಹಿಯೇ ಲೌ ಲಗಾನಿ ಕೆ ಸಬ್ ಫಾನಿ ಹೈಂ ಔರ್ ವೋ ಗೈರ್ ಫಾನಿ" ಕವನ ಪ್ರಸ್ತುತಪಡಿಸಿದರು.

ಈ ಅಧಿವೇಶನದ ಮೊದಲ ಭಾಷಣ "ದೇವಾಸ್ತಿತ್ವ (ಅಲ್ಲಾಹನ ಮೇಲೆ ವಿಶ್ವಾಸ ಹೊಂದುವ ಪ್ರಯೋಗಗಳು ಮತ್ತು ಅನುಗ್ರಹಗಳು)" ಎಂಬ ಶೀರ್ಷಿಕೆಯಲ್ಲಿ ಮುಕರ್ರಮ್ ಮೌಲಾನ ಮಹಮ್ಮದ್ ಹಮೀದ್ ಕೌಸರ್ ಸಾಹಿಬ್, ನಾಝಿರ್ ದಾವತ್ ಇಲಲ್ಲಾಹ್ ಕೇಂದ್ರ ಖಾದಿಯಾನ್ ಅವರು ಪ್ರಸ್ತುತಪಡಿಸಿದರು.

ಅಧಿವೇಶನದ ಎರಡನೇ ಭಾಷಣ ಮುಕರ್ರಮ್ ಮೌಲಾನ ಮುಹಮ್ಮದ್ ಇನ್‌ಆಮ್ ಗೋರಿ ಸಾಹಿಬ್ ನಾಝಿರ್ ಆಲಾ, ಅಮೀರ್ ಜಮಾಅತ್ ಅಹ್ಮದಿಯಾ ಖಾದಿಯಾನ್ ಮಾಡಿದರು. ಅವರ ಭಾಷಣದ ಶೀರ್ಷಿಕೆ "ಪ್ರವಾದಿ ಮುಹಮ್ಮದ್ (ಸ) ರವರ ಜೀವನಚರಿತ್ರೆ ಖುತುಬ ಹಜ್ಜತುಲ್ ವಿದಾದ ಬೆಳಕಿನಲ್ಲಿ (ಮಾನವ ಸಮಾನತೆ) ಆಗಿತ್ತು.

ಮೊದಲ ದಿನ ಎರಡನೇ ಅಧಿವೇಶನ

ಜಲ್ಸ ಸಾಲಾನ ಖಾದಿಯಾನ್ 2023 ನ ಮೊದಲ ದಿನದ ಎರಡನೇ ಅಧಿವೇಶನ ಎರಡು ಕಾಲು ಗಂಟೆಗೆ ಸರಿಯಾಗಿ ಮಧ್ಯಾಹ್ನ ಆರಂಭಗೊಂಡಿತು. ಈ ಅಧಿವೇಶನ ಮುಕರ್ರಮ್ ರಫೀಕ್ ಅಹ್ಮದ್ ಸಾಹಿಬ್ ಮಾಲಾಬಾರಿ, ವಕೀಲೆ ಆಲಾ ತಹ್ರೀಕ್ ಜಹೀದ್ ಖಾದಿಯಾನ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ವಾಡಿಕೆಯಂತೆ ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಮುಕರ್ರಮ್ ಹಾಫಿಝ್ ಉಮೈರ್ ಅಬ್ಬಾಸ್ ನಾಯಕ್ ಸಾಹಿಬ್ ಮುರಬ್ಬಿ, ವಖ್ಫೆ ನೌ ಭಾರತ, ಅವರು ಸೂರಃ ಅನ್‌ಫಾಲ್‌ನ ವಚನಗಳು 20 ರಿಂದ 25 ರವರೆಗೆ ಪಠಿಸುವ ಭಾಗ್ಯ ಪಡೆದರು. ನಂತರ ತಫ್ಸೀರ್ ಸಗ್ಹೀರ್‌ನಿಂದ ಮು. ಡಾ॥ ಜಾಮೀದ್ ಅಹ್ಮದ್ ಲೋನ್ ಸಾಹಿಬ್ ನಾಝಿರ್ ದೀವಾನ್ ಖಾದಿಯಾನ್ ಪ್ರಸ್ತುತಪಡಿಸಿದರು. ಮು. ಸಈದ್ ಅಹ್ಮದ್ ಸಾಹಿಬ್ ಮಲ್ಕಾನಾ, ಮುರಬ್ಬಿ ಸಿಲ್‌ಸಿಲಾ ನಝಾಮತ್ ಜಾಯೆದಾದ್ ಖಾದಿಯಾನ್ ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಕವನ ಸಂಕಲನದಿಂದ "ವೋ ಪೇಶ್ವಾ ಹಮಾರ ಜಿಸ್‌ಸೇ ಹೈ ನೂರ್ ಸಾರಾ ನಾಮ್ ಉಸ್ಕಾ ಹೈ ಮುಹಮ್ಮದ್ ದಿಲ್‌ಬರ್ ಮೇರಾ ಮಹೀ ಹೈ." ಯಿಂದ ಕೆಲವು ಸಾಲುಗಳು ಮಧುರ ಕಂಠದಿಂದ ಹಾಡಿದರು.

ಈ ಅಧಿವೇಶನದ ಮೊದಲ ಭಾಷಣ, ಸಹಾಬರ ಚರಿತ್ರೆ, ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ), ಮು. ಮೌಲಾನ ಝೈನುದ್ದೀನ್ ಹಾಮಿದ್ ಸಾಹಿಬ್, ನಾಝಿಮ್ ದಾರುಲ್ ಖಝಾ ಖಾದಿಯಾನ್ ಮಾಡಿದರು.

ಈ ಅಧಿವೇಶನದ ಎರಡನೇ ಭಾಷಣ "ಖುತುಬಾತ್ ಖಿತಾಬಾತ್ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರಿಂದ ಪ್ರಯೋಜನ, ಪ್ರಾಮುಖ್ಯತೆ ಹಾಗೂ ಅನುಗ್ರಹ" ಶೀರ್ಷಿಕೆಯಿಂದ ಮು. ಮೌಲಾನ ಮುನೀರ್ ಅಹ್ಮದ್ ಖಾದಿಮ್ ಸಾಹಿಬ್ ಎಡಿಷ್ನಲ್ ನಾಝಿರ್ ಇಸ್ಲಾಹ್ ವ ಇರ್ಷಾದ್ (ದಕ್ಷಿಣ ಭಾರತ) ಅವರು ಪ್ರಸ್ತುತಪಡಿಸಿದರು.

ಈ ಅಧಿವೇಶನದ ಮೂರನೇ ಭಾಷಣ, "ಬಾಶರಹ್ ಚಂದಾ ಮತ್ತು ವಸೀಯ್ಯತ್ ವ್ಯವಸ್ಥೆಯ ಪ್ರಾಮುಕ್ಯತೆ ಹಾಗೂ ಅನುಗ್ರಹಗಳು" ಎಂಬ ಶೀರ್ಷಿಕೆಯಿಂದ ಮು. ಮೌಲಾನ ಸಯ್ಯದ್ ಕಲೀಮುದ್ದೀನ್ ಅಹ್ಮದ್ ಸಾಹಿಬ್ ಮುರಬ್ಬಿ ಹಾಗೂ ಖಾಝಿ ಅವರು ಪ್ರಸ್ತುತಪಡಿಸಿದರು.

ದಿನಾಂಕ 30 ಡಿಸೆಂಬರ್ 2023 ಶನಿವಾರ

ಎರಡನೆ ದಿನ ಮೊದಲ ಅಧಿವೇಶನ

ಎರಡನೇ ದಿನದ ಮೊದಲ ಅಧಿವೇಶನದ ಅಧ್ಯಕ್ಷತೆ ಮು. ಮುನೀರ್ ಅಹ್ಮದ್ ಸಾಹಿಬ್ ಹಾಫಿಝಾಬಾದಿ, ಕಾರ್ಯದರ್ಶಿ ಮಜ್ಲಿಸ್ ಕಾರ್‌ಪದ್‌ದಾಸ್ ಬಹಿಷ್ತಿ ಮಖ್‌ಬರ ಖಾದಿಯಾನ್ ಅವರು ವಹಿಸಿದ್ದರು. ಪವಿತ್ರ ಖುರ್‌ಆನ್‌ನ ಪಠಣ ಮು. ಲುಖ್ಮಾನ್ ಅಹ್ಮದ್ ತಖೀ ಸಾಹಿಬ್ ಜಾಮಿಯಾ ಅಹ್ಮದಿಯಾ ಖಾದಿಯಾನ್‌ನ ವಿದ್ಯಾರ್ಥಿ ಅವರು ನೇರವೇರಿಸಿದರು. ಅದರ ಅನುವಾದ ಮು. ಮೌಲ್ವಿ ಶೇಖ್ ಮುಜಾಹಿದ್ ಅಹ್ಮದ್ ಶಾಸ್ತ್ರಿ ಸಾಹಿಬ್ ಮ್ಯಾನೇಜರ್ ಸಾಪ್ತಾಹಿಕ ಪತ್ರಿಕೆ ಬದರ್ ಖಾದಿಯಾನ್ ಪ್ರಸ್ತುತಪಡಿಸಿದರು. ನಂತರ ಮು. ದಬೀರ್ ಅಹ್ಮದ್ ಶಮೀಮ್ ಸಾಹಿಬ್ ಖಾದಿಯಾನ್ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರ ಕವನ ಸಂಕಲನದಿಂದ ಅತ್ಯಂತ ಮಧುರವಾಗಿ ಓದಿ ತಿಳಿಸಿದರು.

ಈ ಅಧಿವೇಶನದ ಮೊದಲ ಭಾಷಣ ಮು. ಹಮೀದುಲ್ಲಾಹ್ ಹಸನ್ ಸಾಹಿಬ್ ಅಮೀರ್ ಹಾಗೂ ಮುಬಲ್ಲಿಗ್ ಇನ್‌ಚಾರ್ಜ್ ಹೈದರಾಬಾದ್, "ಅಹ್ಮದಿ ಹುತಾತ್ಮರ ಅದ್ವಿತೀಯ ತ್ಯಾಗಗಳು" ಎಂಬ ಶೀರ್ಷಿಕೆಯಡಿಯಲ್ಲಿ ಭಾಷಣ ಮಾಡಿದರು. ನಂತರ ಈ ಅಧಿವೇಶನದ ಎರಡನೇ ಭಾಷಣ ಮು. ಮುಝಫ್ಫರ್ ಅಹ್ಮದ್ ನಾಸೀರ್ ಸಾಹಿಬ್ ನಾಝೀರ್ ಇಸ್ಲಾಹ್ ವ ಇರ್ಷಾದ್ ಖಾದಿಯಾನ್ "ಅಹ್ಮದಿಯಾ ಜಮಾಅತಿನ ಉಜ್ವಲ ಭವಿಷ್ಯ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಲೀಫರ ಅಧ್ಯಾಪನೆಗಳ ಬೆಳಕಿನಲ್ಲಿ" ಭಾಷಣ ಪ್ರಸ್ತುತಪಡಿಸಿದರು.

ಅನಿಸಿಕೆಗಳು ಮತ್ತು ಪರಿಚಯಾಧಾರಿತ ಭಾಷಣಗಳು

*(ಪುಟ-09ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಸತ್ಯನಿಷೇಧಿಗಳ ಮೇಲೆ ವಿಜಯದ ನಂತರ ಒಂದು ತಾತ್ಕಾಲಿಕ ಸೋಲಿನ ಸ್ಥಿತಿ ಉಂಟಾಗಲು ಕಾರಣವೇನೆಂದರೆ, ಕೆಲವು ಜನರು ಹಝ್ರತ್ ಪೈಗಂಬರ್(ಸ)ರ ಒಂದು ಆದೇಶಕ್ಕೆ ವಿರುದ್ಧವಾಗಿ ನಡೆದಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರ ನಿರ್ದೇಶನಕ್ಕೆ ವಿರುದ್ಧವಾಗಿ ಅವರ ನಿರ್ದೇಶನವನ್ನು ಸ್ವತಃ ವ್ಯಾಖ್ಯಾನಿಸಲು ಶುರುಮಾಡಿದರು. ಹೃದಯಮಿಡಿತಕ್ಕೆ ಅನುಸಾರವಾಗಿ ನಾಡಿಮಿಡಿತ ಇರುವ ರೀತಿಯಲ್ಲಿ ಆ ಜನರು ಮುಹಮ್ಮದ್ ರಸೂಲುಲ್ಲಾಹ್(ಸ)ರನ್ನು ಅನುಸರಿಸುತ್ತಿದ್ದರೆ, ಮುಹಮ್ಮದ್ ರಸೂಲುಲ್ಲಾಹ್(ರ)ರ ಆದೇಶವನ್ನು ಅನುಸರಿಸಲಿಕ್ಕಾಗಿ ಪೂರ್ತಿ ಲೋಕಜನರಿಗೆ ತಮ್ಮ ಜೀವಗಳನ್ನು ತ್ಯಾಗ ಮಾಡಬೇಕಾಗಿ ಬಂದರೂ ಅದು ಸಣ್ಣದಾದ ಸಂಗತಿಯಾಗಿದೆ ಎಂದು ಅವರು ಮನವರಿಕೆ ಮಾಡಿದ್ದರೆ, ಹಝ್ರತ್ ಪೈಗಂಬರ್(ಸ)ರ ಆದೇಶವನ್ನು ಸ್ವತಃ ವ್ಯಾಖ್ಯಾನಿಸದೇ ಆ ಪರ್ವತದ ಪ್ರದೇಶವನ್ನು ಬಿಡದೇ ಇರುತ್ತಿದ್ದರೆ, ಶತ್ರುಗಳಿಗೆ ಪುನಃ ದಾಳಿ ನಡೆಸಲು ಸಂದರ್ಭ ಲಭಿಸುತ್ತಿರಲಿಲ್ಲ ಮತ್ತು ಹಝ್ರತ್ ಪೈಗಂಬರ್(ಸ) ಹಾಗೂ ಅವರ ಸಹಾಬಿಯರಿಗೆ ಯಾವುದೇ ನಷ್ಟ ಉಂಟಾಗುತ್ತಿರಲಿಲ್ಲ. (ಹಝ್ರತ್ ಮುಸ್ಲಿಹ್ ಮೌಊದ್[ರ])

ಕೇಳಿರಿ, ಹಝ್ರತ್ ಪೈಗಂಬರ್(ಸ)ರನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನ ಆಣೆಯನ್ನು ಹಾಕಿಕೊಂಡು ಹೇಳುತ್ತೇನೆ, ಹಝ್ರತ್ ಪೈಗಂಬರ್(ಸ) ಒಂದು ಅಂಗುಳದಷ್ಟು ಕೂಡ ಹಿಂದೆ ಸರಿಯಲಿಲ್ಲ ಮತ್ತು ಅವರು ಶತ್ರುಗಳ ನೇರ ಮುಂದೆ ನಿಂತಿದ್ದರು

ಮುಹಾಜಿರುಗಳಲ್ಲಿ ಒಬ್ಬ ವ್ಯಕ್ತಿ ಹೀಗೆ ಹೇಳುವುದನ್ನು ನಾನು ಆಲಿಸಿದ್ದೇನೆ, ಉಹುದ್ ಯುದ್ಧದಲ್ಲಿ ಎಲ್ಲೆಡೆಗಳಿಂದಲೂ ಬಾಣಗಳು ಬರುತ್ತಿದ್ದುವು ಮತ್ತು ಹಝ್ರತ್ ಪೈಗಂಬರ್(ಸ) ಶತ್ರುಗಳ ನಡುವೆ ಇದ್ದರು. ಎಲ್ಲ ಬಾಣಗಳು ಹಝ್ರತ್ ಪೈಗಂಬರ್(ಸ)ರಿಗೆ ತಟ್ಟದೇ ದೂರ ಹೋಗುತ್ತಿದ್ದುವು.

ಪ್ರವಾದಿಗಳು ಧೈರ್ಯದ ಸಂಕೇತವಾಗಿರುತ್ತಾರೆ. ಸರ್ವಶಕ್ತನಾದ ಅಲ್ಲಾಹನಿಗೆ ಇಸ್ಲಾಮಿನೊಂದಿಗೆ ಯಾವುದೇ ದ್ವೇಷವಿರಲಿಲ್ಲ, ಆದರೆ ನೋಡಿ! ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗಿ ಉಳಿದರು. ಇದರ ರಹಸ್ಯವೇನೆಂದರೆ, ಹಝ್ರತ್ ಪೈಗಂಬರ್(ಸ)ರ ಧೈರ್ಯ ಜನರಿಗೆ ಗೊತ್ತಾಗಬೇಕು ಎಂದಾಗಿತ್ತು. ಆ ಸಂದರ್ಭದಲ್ಲಿ ಅವರು ಹತ್ತು ಸಾವಿರ ಶತ್ರುಗಳ ಮುಂದೆ ಒಬ್ಬಂಟಿಯಾಗಿ ನಿಂತಿದ್ದರು. ಆಗಲೂ 'ನಾನು ಅಲ್ಲಾಹನ ಪ್ರವಾದಿಯಾಗಿರುವೆನು' ಎಂದು ಅವರು ಘೋಷಿಸಿದರು. ಇಂತಹ ಮಾದರಿಯನ್ನು ತೋರಿಸಲು ಯಾವುದೇ ಪ್ರವಾದಿಗೆ ಸಂದರ್ಭ ಲಭಿಸಲಿಲ್ಲ. (ಹಝ್ರತ್ ಮಸೀಹ್ ಮೌಊದ್[ಅ])

ಉಹುದ್ ಯುದ್ಧದ ಘಟನೆಗೆ ಸಂಬಂಧಿಸಿ ಅನೇಕರು ವ್ಯಾಖ್ಯಾನಿಸಿದ್ದಾರೆ. ಆದರೆ ಸತ್ಯವೇನೆಂದರೆ, ಆ ಸಮಯದಲ್ಲಿ ಅಲ್ಲಾಹನ ಪ್ರತಾಪ ಪ್ರಕಟಗೊಳ್ಳುತ್ತಿತ್ತು. ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲದೇ ಬೇರೆ ಯಾರಿಗೂ ಅದನ್ನು ಸಹಿಸುವ ಶಕ್ತಿ ಇರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅಲ್ಲೇ ನಿಂತರು ಮತ್ತು ಇತರ ಸಹಾಬಿಯರು ಅಸ್ಥಿರಗೊಂಡರು. ಹಝ್ರತ್ ಪೈಗಂಬರ್(ಸ)ರ ಜೀವಿತದಲ್ಲಿ ಕಾಣುವಂತಹ ಸತ್ಯಸಂಧತೆ ಮತ್ತು ನಿಷ್ಠೆಯ ಉದಾಹರಣೆ ಎಲ್ಲೂ ಇಲ್ಲದ ರೀತಿಯಲ್ಲೇ ಅವರಿಗೆ ಲಭಿಸಿದ ದೈವಿಕ ಸಹಾಯಗಳ ಉದಾಹರಣೆ ಎಲ್ಲೂ ಕಾಣಲು ಸಾಧ್ಯವಲ್ಲ. (ಹಝ್ರತ್ ಮಸೀಹ್ ಮೌಊದ್[ಅ])

**ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್[ಸ]ರವರ ಅಸಾಧಾರಣ ಶೌರ್ಯ, ಸ್ಥಿರಚಿತ್ತತೆ ಹಾಗೂ ಧೈರ್ಯದ ಬಗ್ಗೆ ವಿವರಾತ್ಮಕ ಪ್ರಸ್ತಾವನೆ**

ನಾಲ್ಕು ದಿವಂಗತರಾದ ಮಾನ್ಯ ಡಾ. ಮುಹಮ್ಮದ್ ಜಲಾಲ್ ಶಮ್ಸ್ ಸಾಹಿಬ್, ಮಾನ್ಯ ಮಾಸ್ಟರ್ ಮುಹಮ್ಮದ್ ಇಬ್ರಾಹೀಂ ಸಾಹಿಬ್ ಭಾಂಬ್ರಿ (ರಬ್ವಾಹ್), ಮಾನ್ಯ ಯೂಸುಫ್ ಅಜಾರೆ ಸಾಹಿಬ್ (ಘಾನಾ) ಮತ್ತು ಮಾನ್ಯ ಅಲ್‌ಹಾಜ್ ಉಸ್ಮಾನ್ ಆದಮ್ ಸಾಹಿಬ್ (ಘಾನಾ)ರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **29-12-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ. اَلرَّحْمٰنِ الرَّحِيمِ. مٰلِكِ يَوْمِ الدِّينِ.

اِيَّاكَ نَعْبُدُ وَاِيَّاكَ نَسْتَعِينُ. اِهْدِنَا الصِّرَاطَ الْمُسْتَقِيمَ.

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ.

ಇಂದು ಸಹ ಉಹುದ್ ಯುದ್ಧದ ಇನ್ನಷ್ಟು ವಿವರಣೆಯನ್ನು ನೀಡುತ್ತೇನೆ. ಪ್ರಸ್ತಾಪಿಸಲಾದಂತೆ ಪರ್ವತ ಮಾರ್ಗ ಖಾಲಿಯಾದ ಕಾರಣದಿಂದ ಸತ್ಯನಿಷೇಧಿಗಳು ಹಿಂದಿನಿಂದ ದಾಳಿ ನಡೆಸಿದ್ದರು ಮತ್ತು ಯುದ್ಧದ ಪಗಡೆ ತಿರುಗಿತು. ಶತ್ರುಗಳ ದಾಳಿ ಅತ್ಯಂತ ಭಯಾನಕವಾಗಿತ್ತು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಸ್ಥಿರಚಿತ್ತತೆ, ಧೈರ್ಯ, ಶೌರ್ಯದ ಮಾದರಿಯ ಬಗ್ಗೆ ಹೀಗೆ ಬರೆಯಲಾಗಿದೆ: ಯುದ್ಧದ ದಾಳ ತಿರುಗಿದ ನಂತರ ಸಹಾಬಿಯರು ಮೂರ್ಛೆ ಹೋದವರಂತೆ ತಮ್ಮನ್ನು ತಾವೇ ನಿಯಂತ್ರಿಸಲು ಸಾಧ್ಯವಾಗದೇ ಹೋದಾಗ ಮತ್ತು ಗೊಂದಲಕ್ಕೆ ಗುರಿಯಾದಾಗ ಹಝ್ರತ್ ಪೈಗಂಬರ್(ಸ) ಆ ಗಡಿಬಿಡಿಯ ಮತ್ತು ನಾಲ್ಕೂ ಕಡೆಯಿಂದಲೂ ಶತ್ರುಗಳು ಒಟ್ಟು ಸೇರಿರುವ ಸ್ಥಿತಿಯಲ್ಲೂ ಸ್ಥಿರಚಿತ್ತತೆಯಿಂದ ಇದ್ದರು. ಸಹಾಬಿಯರು ಗಾಬರಿಗೊಂಡು ಪರಾರಿಯಾಗುತ್ತಾ ಇರುವುದನ್ನು ಕಂಡು ಅವರಿಗೆ ಕರೆ ನೀಡುತ್ತಾ ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಾ ಇದ್ದರು: ಎಲೈ ಜನರೇ ನನ್ನ ಬಳಿಗೆ ಬನ್ನಿರಿ, ಎಲೈ ಜನರೇ ನನ್ನ ಬಳಿಗೆ ಬನ್ನಿರಿ, ನಾನು ಅಲ್ಲಾಹನ ಸಂದೇಶವಾಹಕನಾಗಿರುವೆನು. ಆ ಸಮಯದಲ್ಲಿ ಅವರ ಕಡೆಗೆ ಬಿಲ್ಲುಗಳನ್ನು ವರ್ಷಿಸಲಾಗುತ್ತಿತ್ತು. ಒಂದು ವರದಿಯಲ್ಲಿ ಹೀಗೆ ಬಂದಿದೆ – ಅವರು ಉಚ್ಚ ಸ್ವರದಲ್ಲಿ ಹೀಗೆ ಹೇಳುತ್ತಿದ್ದರು:

**ಅನನ್ನಬಿಯು ಲಾ ಕಧಿಬ್ ಅನಾ ಇಬ್ನು ಅಬ್ದಿಲ್ ಮುತ್ತಲಿಬ್. ಅನಾ ಇಬ್ನುಲ್ ಅವಾತಿಕ್.**

ಅರ್ಥ: ನಾನು ಪ್ರವಾದಿಯಾಗಿರುವೆನು. ಅದರಲ್ಲಿ ಯಾವುದೇ ಸುಳ್ಳು ಇಲ್ಲ. ನಾನು ಅಬ್ದುಲ್ ಮುತ್ತಲಿಬ್‌ರ ಪುತ್ರನಾಗಿರುವೆನು. ನಾನು ಆತಿಕರ ಪುತ್ರನಾಗಿರುವೆನು. ಈ ವಾಕ್ಯಗಳನ್ನು ಹಝ್ರತ್ ಪೈಗಂಬರ್(ಸ) ಹುನೈನ್ ಯುದ್ಧದಲ್ಲಿ ನುಡಿದಿದ್ದರು ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಹೇಗಿದ್ದರೂ ಇದೇ ಮಾತುಗಳನ್ನು ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧದಲ್ಲೂ ಹೇಳಿರಲು ಸಾಧ್ಯವಿದೆ. (ಸೀರತುಲ್ ಹಲಬೀಯ್ಯ, ಸಂಪುಟ-2, ಪುಟ-310, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಅವಾತಿಕ್ ಎಂಬುದು ಆತಿಕದ ಬಹುವಚನವಾಗಿದೆ. ಆತಿಕ ಎಂಬ ಹೆಸರಿನ ಒಂದಕ್ಕಿಂತ ಹೆಚ್ಚಿನ ಮಹಿಳೆಯರು ಹಝ್ರತ್ ಪೈಗಂಬರ್(ಸ)ರ ಅಜ್ಜಿಯಂದಿರಲ್ಲಿ ಇದ್ದರು. ಒಬ್ಬರು ಅಬ್ದ್ ಮನಾಫ್ ಅವರ ತಾಯಿ ಅತಿಕಾ ಬಿಂತ್ ಹಿಲಾಲ್, ಎರಡನೆಯವರು ಹಾಶಿಮ್ ಬಿನ್ ಅಬ್ದ್ ಮನಾಫ್ ಅವರ ತಾಯಿ ಅತಿಕಾ ಬಿಂತ್ ಮುರ್ರಾ ಎಂಬವರಾಗಿದ್ದರು ಮತ್ತು ಮೂರನೆಯವರು ವಹ್ಬ್ ಅವರ ತಾಯಿ ಅಂದರೆ ಹಝ್ರತ್ ಅಮಿನಾ ಅವರ ತಂದೆಯ ತಾಯಿ ಅತಿಕಾ ಬಿಂತ್ ಔಕಸ್ ಆಗಿದ್ದರು. ಒಂದು ವರದಿಯ ಪ್ರಕಾರ, ಇವರು ಒಂಬತ್ತು ಮಹಿಳೆಯರಾಗಿದ್ದರು. ಮೂವರು ಬನು ಸುಲೈಮ್‌ನವರು ಮತ್ತು ಆರು ಜನರು ಇತರ ಜನರಿಂದ ಬಂದವರು ಮತ್ತು ಅವರೆಲ್ಲರೂ ಹಝ್ರತ್ ಪೈಗಂಬರ್(ಸ)ರ ಪೂರ್ವಜರಾಗಿದ್ದರು. (ಲುಗಾತುಲ್ ಹದೀಸ್, ಸಂಪುಟ-3, ಪುಟ-97, ನೌಮಾನಿ ಲೈಬ್ರರಿ, ಲಾಹೋರ್)

ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿರುವರು: ಈಗ ವಿಜಯ ಉಂಟಾಗಿದೆ ಎಂದು ಅಬ್ದುಲ್ಲಾಹ್ ಬಿನ್ ಜುಬೈರ್(ರ)ರ ಸಂಗಡಿಗರು ನೋಡಿದಾಗ ಅವರು ತಮ್ಮ ನೇತಾರರಾದ ಅಬ್ದುಲ್ಲಾಹ್‌ರೊಡನೆ ಹೀಗೆ ಹೇಳಿದರು: ಸೈನ್ಯದೊಂದಿಗೆ ಪಾಲ್ಗೊಳ್ಳಲು ನಮಗೂ ಅನುಮತಿ ಕೊಡಿರಿ. ಅಬ್ದುಲ್ಲಾಹ್(ರ) ಅವರನ್ನು ತಡೆದರು. ಆದರೆ ಅವರು ಹೀಗೆ ಹೇಳುತ್ತಾ ಕೆಳಗೆ ಇಳಿದರು: ಪೂರ್ಣವಾದ ಸಮಾಧಾನದ ಸ್ಥಿತಿಯಾಗುವ ವರೆಗೂ ಪರ್ವತದ ಹಾದಿಯನ್ನು ಬಿಡಬೇಡಿರಿ ಎಂದಾಗಿತ್ತು ಹಝ್ರತ್ ಪೈಗಂಬರ್(ಸ) ಹೇಳಿದ ಮಾತಿನ ಉದ್ದೇಶ. ಪರ್ವತದ ಹಾದಿಯ ಮೈದಾನ ಪೂರ್ಣವಾಗಿ ಖಾಲಿಯಾಗಿರುವುದನ್ನು ಖಾಲಿದ್ ಬಿನ್ ವಲೀದ್ ಕಂಡರು. ಆಗ ಅವರು ತಮ್ಮ ಸವಾರರನ್ನು ಮತ್ತು ಇಕ್ರಿಮ ಬಿನ್ ಅಬೂಜಹಲಿನ ಸಂಘವನ್ನು ಜೊತೆಗೆ ಕೊಂಡು ಹೋಗಿ ಅಬ್ದುಲ್ಲಾಹ್ ಬಿನ್ ಜುಬೈರ್(ರ) ಮತ್ತು ಅವರ ಕೆಲವು ಸಂಗಡಿಗರನ್ನು ಕೆಲವೇ ಕ್ಷಣಗಳಲ್ಲಿ ಶಹೀದ್ ಮಾಡಿಕೊಂಡು ಇಸ್ಲಾಮಿನ ಸೈನ್ಯದ ಹಿಂದಿನಿಂದ ಅಚಾನಕ್ಕಾದ ದಾಳಿ ನಡೆಸಿದರು. ಈ ಅಚಾನಕ್ಕಾದ ಹಲ್ಲೆಯಿಂದ ಅಜಾಗರೂಕರಾಗಿ ಮತ್ತು ವಿಜಯದ ತೃಪ್ತಿಯಲ್ಲಿ ಚದುರಿಹೋಗುತ್ತಿದ್ದ ಮುಸ್ಲಿಮರು ಇನ್ನೂ ಚೇತರಿಸಿಕೊಳ್ಳಲು ಮತ್ತು ಮುಶ್ರಿಕೀನರ ದಾಳಿಯನ್ನು ಹಿಮ್ಮೆಟ್ಟಿಸಲು ಹಿಂತಿರುಗಲು ಬಯಸಿದ್ದರು. ಆ ಸಮಯದಲ್ಲಿ, ಒಬ್ಬ ಬುದ್ಧಿವಂತ ಎದುರಾಳಿಯು ಎಲೈ ಮುಸ್ಲಿಮರೇ! ಅತ್ತ ಕಡೆಯಿಂದಲೂ ಅವಿಶ್ವಾಸಿಗಳು ದಾಳಿ ನಡೆಸಿದ್ದಾರೆ. ಎಂದು ಕೂಗಿದನು. ಮುಸ್ಲಿಮರು ಈ ಕೂಗನ್ನು ಕೇಳಿ ಬೆಚ್ಚಿಬಿದ್ದರು ಮತ್ತು ತಿರುಗಿ ಭಯಭೀತರಾಗಿ ತಮ್ಮ ಜನರ ಮೇಲೆ ಕತ್ತಿಗಳನ್ನು ಹಾರಿಸಲು ಪ್ರಾರಂಭಿಸಿದರು. ಮತ್ತೊಂದೆಡೆ, ಈ ದೃಶ್ಯವನ್ನು ಕಂಡ ಮಕ್ಕಾದ ವೀರ ಮಹಿಳೆಯಾದ ಉಮ್ರಾ ಬಿಂತ್ ಅಲ್‌ಕಮಾ, ತಕ್ಷಣ ಮುಂದೆ ಹೋಗಿ ಧೂಳಿನಲ್ಲಿ ಬಿದ್ದಿದ್ದ ಖುರೈಶ್‌ರ ಧ್ವಜವನ್ನು ಎತ್ತಿಕೊಂಡು ಅದನ್ನು ಮೇಲಕ್ಕೆ ರೋಹಿಸಿದಳು. ಅದನ್ನು ಕಂಡ ತಕ್ಷಣ ಚದುರಿಹೋದ ಖುರೈಶರ ಸೈನ್ಯವು ಮತ್ತೆ ಒಗ್ಗೂಡಲು ಪ್ರಾರಂಭಿಸಿತು. ಹೀಗೆ ಮುಸ್ಲಿಮರು ನಿಜವಾಗಿಯೂ ಎಲ್ಲಾ ಕಡೆಯಿಂದಲು ಶತ್ರುಗಳ ಕೈಗೆ ಸಿಲುಕಿಕೊಂಡರು ಮತ್ತು ಇಸ್ಲಾಮಿನ ಸೈನ್ಯದಲ್ಲಿ ಅಪಾಯಕಾರಿ ಅಸ್ವಸ್ಥತೆ ಹುಟ್ಟಿಕೊಂಡಿತು. ಇಷ್ಟ ವರೆಗೆ ಕಳೆದ ಖುತ್‌ಬದಲ್ಲಿ ವಿವರಿಸಲಾಗಿದೆ ದಾಳಿ ಹೇಗಿತ್ತು, ಧ್ವಜಾರೋಹಣ ಮಾಡಿದವರು ಯಾರು? ಎಂದು. ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಒಂದು ಎತ್ತರದ ಸ್ಥಳದಲ್ಲಿ ನಿಂತುಕೊಂಡು ಇದನ್ನೆಲ್ಲ ನೋಡುತ್ತಿದ್ದರು ಮತ್ತು ಮುಸ್ಲಿಮರಿಗೆ ಕರೆ ನೀಡುತ್ತಾ ಇದ್ದರು. ಆದರೆ ಈ ಗದ್ದಲದಲ್ಲಿ ಹಝ್ರತ್ ಪೈಗಂಬರ್(ಸ)ರ ಧ್ವನಿ ತಗ್ಗಿ ಹೋಗುತ್ತಿತ್ತು.

ಇತಿಹಾಸಗಾರರಸು ಬರೆದಿರುವುದೇನೆಂದರೆ ಇದೆಲ್ಲವೂ ಬಹಳ ಕಡಿಮೆ ಸಮಯದಲ್ಲಿ ಸಂಭವಿಸಿತು, ಹೆಚ್ಚಿನ ಮುಸ್ಲಿಮರು ಸಂಪೂರ್ಣವಾಗಿ ಪ್ರಜ್ಞಾಹೀನರಾಗಿದ್ದರು. ಈ ಪ್ರಜ್ಞಾಹೀನ ಹೇಗಿತ್ತು ಎಂದರೆ ಅದರಲ್ಲಿ ಕೆಲವು ಮುಸಲ್ಮಾನರು ಒಬ್ಬರಿಗೊಬ್ಬರು ಹೊಡದಾಡಿಕೊಳ್ಳುತ್ತಿದ್ದರು ಮತ್ತು ತಮ್ಮಲ್ಲಿ ಮತ್ತು ಬೇರೆಯವರಲ್ಲಿ ಯಾವುದೇ ಭೇದವಿರಲಿಲ್ಲ.

ಹೀಗೆ ಸ್ವತಃ ಕೆಲವು ಮುಸ್ಲಿಮರು ಮುಸ್ಲಿಮರ ಕೈಯಿಂದ ಗಾಯಗೊಂಡರು "ಮತ್ತು ಹಿಂದಿನ ಖುತ್‌ಬದಲ್ಲಿ ಉಲ್ಲೇಖಿಸಿದಂತೆ" ಹುಝೈಫರ ತಂದೆ ಯಮಾನ್ ಅವರನ್ನು ಮುಸ್ಲಿಮರು ತಪ್ಪಾಗಿ ಶಹೀದ್ ಮಾಡಿದರು. ಆ ಸಮಯದಲ್ಲಿ ಹುದೈಫಾ(ರ) ಹತ್ತಿರದಲ್ಲಿದ್ದರು, ಅವರು ಓ ಮುಸ್ಲಿಮರೇ! ಇದು ನನ್ನ ತಂದೆ ಎಂದು ಹೇಳಿದರು, ಆದರೆ ಆ ಸಮಯದಲ್ಲಿ ಯಾರು ಕೇಳುತ್ತಿದ್ದರು? ಹಝ್ರತ್ ಪೈಗಂಬರ್(ಸ) ನಂತರ ಮುಸ್ಲಿಮರ ಪರವಾಗಿ ಯಮಾನ್ ರಕ್ತ ಪರಿಹಾರವನ್ನು ಪಾವತಿಸಲು ಬಯಸಿದ್ದರು, ಆದರೆ ಹುದೈಫಾ(ರ) ಅವರು ಅದನ್ನು ಸ್ವೀಕರಿಸಲು ನಿರಾಕರಿಸಿದರು. ನನ್ನ ತಂದೆಯ ರಕ್ತ ಪರಿಹಾರವನ್ನು ನಾನು ಮುಸ್ಲಿಮರಿಗೆ ಕ್ಷಮಿಸುತ್ತೇನೆ ಎಂದು ಹೇಳಿದರು." (ಸೀರತ್ ಖತಮನ್ನಬೀಈನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ, ಪುಟ 491-492)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಈ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ)ರವರು ಉಹುದ್ ಯುದ್ಧದಲ್ಲಿ ಗಾಯಗೊಂಡಾಗ ಅದು ಕರಾಳದ ಸಮಯವಾಗಿತ್ತು ಮತ್ತು ಅಂತಹ ಘಟನೆಗಳು ಇಸ್ಲಾಮಿನ ಸೈನ್ಯದ ವಿಜಯವು ಸೋಲಿಗೆ ತಿರುಗಿತು. ಈ ಯುದ್ಧದಲ್ಲಿ, ಹಝ್ರತ್ ಪೈಗಂಬರ್(ಸ) ಅವರು ತಮ್ಮ ಕೆಲವು ಜನರನ್ನು ಆಯ್ಕೆ ಮಾಡಿ ಪರ್ವತದ ಹಾದಿಯ ಬಳಿ ನೇಮಿಸಿ ಅವರಿಗೆ ಆದೇಶಿಸಿದರು: ಯುದ್ಧದ ಪರಿಸ್ಥಿತಿ ಏನೇ ಆಗಲಿ, ನೀವು ಈ ಹಾದಿಯನ್ನು ಬಿಡಬಾರದು. ಅವಿಶ್ವಾಸಿಗಳ ಸೈನ್ಯವು ಚದುರಿ ಹೋದಾಗ ಈಗ ಇಲ್ಲೇ ಇದ್ದು ಏನು ಪ್ರಯೋಜನ, ನಾವೂ ಹೋಗಿ ಹೋರಾಟದಲ್ಲಿ ಪಾಲ್ಗೊಳ್ಳೋಣ ಎಂದು ತಪ್ಪಾಗಿ ಭಾವಿಸಿದರು. ಅವರ ನಾಯಕರು ಅವರಿಗೆ ಹೇಳಿದರು: ಹಝ್ರತ್ ಪೈಗಂಬರ್(ಸ)ರ ಆದೇಶವಿದೆ ನಾವು ಈ ಹಾದಿಯನ್ನು ತ್ಯಜಿಸಬಾರದು ಎಂದು ಹೇಳಿದ್ದಾರೆ ಅದಕ್ಕೆ ಅವರು ಹೇಳಿದರು, ಆದರೆ ಹಝ್ರತ್ ಪೈಗಂಬರ್(ಸ)ರ ಉದ್ದೇಶವು ವಿಜಯ ಸಾಧಿಸಿದ ನಂತರವೂ ಸಹ ಇಲ್ಲಿಯೇ ನಿಲ್ಲಬೇಕು ಎಂದಾಗಿರಲಿಲ್ಲ. ಬದಲಿಗೆ ಅವರ(ಸ) ಆದೇಶದ ಉದ್ದೇಶವು ಯುದ್ಧ ನಡೆಯುವವರೆಗೂ ಇಲ್ಲಿಯೇ ನಿಲ್ಲಬೇಕು ಎಂದಾಗಿತ್ತು. ಈಗ ಗೆಲುವು ಸಾಧಿಸಲಾಗಿದೆ, ಶತ್ರು ಓಡಿಹೋಗುತ್ತಿರುವಾಗ, ನಮಗೂ ಸ್ವಲ್ಪ ಜಿಹಾದಿನ ಪ್ರತಿಫಲ ಸಿಗಬೇಕು. ಹೀಗೆ ಆ ಪರ್ವತದ ದಾರಿಯು ಖಾಲಿಯಾಯಿತು. ಇನ್ನೂ ಮುಸಲ್ಮಾನರಾಗದ ಹಝ್ರತ್ ಖಾಲಿದ್ ಬಿನ್ ವಲೀದ್, ಯೌವನ ವಯಸ್ಸಿನಲ್ಲಿದ್ದರು ಮತ್ತು ಅವರ ದೃಷ್ಟಿ ಬಹಳ ತೀಕ್ಷ್ಣವಾಗಿತ್ತು. ಅವರು ತನ್ನ ಸೈನ್ಯದೊಂದಿಗೆ ಓಡಿಹೋಗುವಾಗ, ಹಿಂದಿರುಗಿ ನೋಡಿದಾಗ ಪರ್ವತದ ಹಾದಿ ಖಾಲಿಯಾಗಿರುವುದನ್ನು ಕಂಡುಕೊಂಡರು. ಇದನ್ನು ನೋಡಿದ ಅವರು ಹಿಂತಿರುಗಿ ಮುಸ್ಲಿಮರ ಹಿಂಬದಿಯ ಮೇಲೆ ದಾಳಿ ಮಾಡಿದರು. ಈ ದಾಳಿಯು ಮುಸ್ಲಿಮರಿಗೆ ಸಂಪೂರ್ಣವಾಗಿ ಅನಿರೀಕ್ಷಿತವಾದ್ದರಿಂದ, ಅವರು ಬಹಳವಾಗಿ ಗಾಬರಿಗೊಂಡರು. ಮತ್ತು ಚದುರಿಹೋಗಿದ್ದ ಕಾರಣದಿಂದ ಶತ್ರುಗಳನ್ನು ವಿರೋಧಿಸಲು ಸಾಧ್ಯವಾಗಲಿಲ್ಲ." (ತಫ್ಸೀರ್ ಕಬೀರ್, ಸಂಪುಟ 9, ಪುಟಗಳು 76-77)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಸೂರತುನ್ನೂರಿನ 64ನೇ ವಚನದ ವ್ಯಾಖ್ಯಾನದಲ್ಲಿ ಈ ಬಗ್ಗೆ ಹೀಗೆ ಹೇಳುತ್ತಾರೆ: ಯಾರು ಈ ಪ್ರವಾದಿಯ ಆದೇಶಗಳಿಗೆ ವಿರುದ್ಧವಾಗಿ ನಡೆಯುತ್ತಾರೋ ಅವರು ಅಲ್ಲಾಹನ ಕಡೆಯಿಂದ ಯಾವುದಾದರೂ ಆಪತ್ತು ಬಂದೆರಗುವುದರ ಬಗ್ಗೆ ಭಯಪಡಬೇಕಾಗಿದೆ. ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಆದೇಶಕ್ಕೆ ವಿರುದ್ಧವಾಗಿ ವರ್ತಿಸಿದ ಕಾರಣದಿಂದ ಇಸ್ಲಾಮಿನ ಸೈನ್ಯಕ್ಕೆ ಎಷ್ಟೊಂದು ನಷ್ಟವುಂಟಾಯಿತು ಎಂದು ನೋಡಿರಿ.

ಹಝ್ರತ್ ಪೈಗಂಬರ್(ಸ) ಅವರು ಐವತ್ತು ಸೈನಿಕರನ್ನು ಪರ್ವತದ ಹಾದಿಯನ್ನು ಕಾಯಲು ನೇಮಿಸಿದ್ದರು ಮತ್ತು ಈ ಹಾದಿಯು ಎಷ್ಟು ಮಹತ್ವದ್ದಾಗಿತ್ತು ಎಂದರೆ ಅವರು ತಮ್ಮ ಅಧಿಕಾರಿ ಅಬ್ದುಲ್ಲಾ ಬಿನ್ ಜುಬೈರ್ ಅನ್ಸಾರಿಯನ್ನು ಕರೆದು ನಾವು ಕೊಲ್ಲಲ್ಪಟ್ಟರೂ ಅಥವಾ ವಿಜಯ ಸಾಧಿಸಿದರೂ ನೀವು ಈ ಹಾದಿಯನ್ನು ತ್ಯಜಿಸಬಾರದು ಎಂದು ಹೇಳಿದ್ದರು. ಆದರೆ ಅವಿಶ್ವಾಸಿಗಳನ್ನು ಸೋಲಿಸಿದಾಗ ಮತ್ತು ಮುಸ್ಲಿಮರು ಅವರನ್ನು ಹಿಂಬಾಲಿಸಲು ಪ್ರಾರಂಭಿಸಿದಾಗ, ಆ ಹಾದಿಯಲ್ಲಿ ನಿಂತಿದ್ದ ಸೈನಿಕರು. ಈಗ ಜಯ ಲಭಿಸಿದೆ ಎಂದು ಅಧಿಕಾರಿಗೆ ತಿಳಿಸಿದರು. ಈಗ ನಾವು ಇಲ್ಲಿ ಉಳಿದುಕೊಂಡರೂ ಪ್ರಯೋಜನವಿಲ್ಲ. ಜಿಹಾದ್‌ಗೆ ಸೇರುವ ಪ್ರತಿಫಲವನ್ನು ತೆಗೆದುಕೊಳ್ಳಲು ನಮಗೆ ಅನುಮತಿಸಿರಿ ಎಂದು ಹೇಳಿದರು ಅದಕ್ಕೆ ಅವರ ಅಧಿಕಾರಿಯು ಅವರಿಗೆ ವಿವರಿಸಿದರು! ಹಝ್ರತ್ ಪೈಗಂಬರ್(ಸ) ಅವರ ಆದೇಶವನ್ನು ಉಲ್ಲಂಘಿಸಬೇಡಿ. ಹುಝೂರ್(ಸ) ಹೇಳಿದ್ದರು ವಿಜಯ ಸಾಧಿಸಿದರೂ ಅಥವಾ ಸೋಲು ಅನುಭವಿಸಿದರೂ ನೀವು ಈ ಹಾದಿಯನ್ನು ತ್ಯಜಿಸಬಾರದು ಆದ್ದರಿಂದ ನಾನು ನಿಮ್ಮನ್ನು ಹೋಗಲು ಅನುಮತಿಸುವುದಿಲ್ಲ

ಎಂದು ಹೇಳಿದರು.

ಅವರು ಹೇಳಿದರು: ಹಝ್ರತ್ ಪೈಗಂಬರ್(ಸ) ಅವರು ವಿಜಯ ಸಾಧಿಸಿದರೂ ನೀವು ಕದಲಬಾರದು ಎಂದು ಅರ್ಥವಲ್ಲ. ನಿಮ್ಮ ಉದ್ದೇಶವು ಒತ್ತು ನೀಡುವುದು ಮಾತ್ರವಾಗಿತ್ತು. ಈಗ ಗೆಲುವು ಸಾಧಿಸಲಾಗಿದೆ, ಇಲ್ಲಿ ನಮ್ಮ ಕೆಲಸವೇನು? ಹೀಗೆ ಅವರು ರಸೂಲುಲ್ಲಾಹ್(ಸ)ರ ಆದೇಶದ ಮೇಲೆ ತಮ್ಮ ಅಭಿಪ್ರಾಯಕ್ಕೆ ಆದ್ಯತೆ ನೀಡಿ ಈ ಹಾದಿಯನ್ನು ತ್ಯಜಿಸಿದರು. ಅವರ ಅಧಿಕಾರಿ ಮತ್ತು ಕೆಲವು ಸೈನಿಕರು ಮಾತ್ರ ಉಳಿದರು. ಅವಿಶ್ವಾಸಿಗಳ ಸೈನ್ಯವು ಮಕ್ಕಾದ ಕಡೆಗೆ ಓಡುತ್ತಿರುವಾಗ, ಇದ್ದಕ್ಕಿದ್ದಂತೆ ಖಾಲಿದ್ ಬಿನ್ ವಲೀದ್ ಹಿಂತಿರುಗಿ ನೋಡಿದಾಗ ಹಾದಿಯನ್ನು ಖಾಲಿಯಾಗಿರುವುದನ್ನು ಕಂಡುಕೊಂಡರು. ಅವರು ಅಮ್ರ್ ಬಿನ್ ಅಲ್-ಆಸ್ ಅವರನ್ನು ಕರೆದರು. ಇವರಿಬ್ಬರು ಇನ್ನೂ ಇಸ್ಲಾಂ ಧರ್ಮವನ್ನು ಪ್ರವೇಶಿಸಿರಲಿಲ್ಲ ಮತ್ತು ಹೇಳಿದರು, ನೋಡಿ! ಎಂತಹ ಒಳ್ಳೆಯ ಅವಕಾಶವಿದೆ, ತಿರುಗಿ ಮುಸಲ್ಮಾನರ ಮೇಲೆ ದಾಳಿ ಮಾಡೋಣ. ಆದ್ದರಿಂದ ಇಬ್ಬರು ಸೇನಾಧಿಪತಿಗಳು ತಮ್ಮ ಪಲಾಯನ ಪಡೆಗಳ ಉಸ್ತುವಾರಿ ವಹಿಸಿಕೊಂಡರು ಮತ್ತು ಇಸ್ಲಾಮಿನ ಸೈನ್ಯದ ತೋಳನ್ನು ಕತ್ತರಿಸುತ್ತ ಪರ್ವತವನ್ನು ಏರಿದರು. ಅಲ್ಲಿದ್ದ ಕೆಲವೇ ಕೆಲವು ಮುಸ್ಲಿಮರಿಗೆ ಶತ್ರುಗಳ ವಿರುದ್ಧ ಹೋರಾಡುವ ಶಕ್ತಿಯಿರಲಿಲ್ಲ ಅವರು ಇಸ್ಲಾಮಿನ ಸೈನ್ಯವನ್ನು ತುಂಡಾಗಿ ಕತ್ತರಿಸಿ ಹಿಂಬದಿಯಿಂದ ದಾಳಿ ನಡೆಸಿದರು. ಅವಿಶ್ವಾಸಿಗಳ ಈ ಅಚಾನಕ್ಕಾದ ದಾಳಿಯಿಂದರೆ ವಿಜಯದ ಖುಷಿಯಲ್ಲಿ ಪಸರಿಸಿದ ಮುಸ್ಲಿಮರು ತಮ್ಮ ಹೆಜ್ಜೆಗಳನ್ನು ತಡೆಯಲಾರದೆ ಪರದಾಡಿದರು. ಕೆಲವೇ ಕೆಲವು ಸಹಚರರು ಓಡಿ ಬಂದು ಹಝ್ರತ್ ಪೈಗಂಬರ್(ಸ) ಅವರ ಸುತ್ತಲೂ ಒಟ್ಟುಗೂಡಿದರು, ಅವರ ಸಂಖ್ಯೆ ಹೆಚ್ಚೆಂದರೆ ಇಪ್ಪತ್ತಾಗಿತ್ತು. ಆದರೆ ಈ ಕೆಲವು ಜನರು ಎಷ್ಟು ಸಮಯದವರೆಗೆ ಶತ್ರುವನ್ನು ವಿರೋಧಿಸಬಹುದು? ಅಂತಿಮವಾಗಿ, ಅವಿಶ್ವಾಸಿಗಳ ದಾಳಿಯಿಂದಾಗಿ, ಮುಸ್ಲಿಂ ಸೈನಿಕರನ್ನು ಸಹ ಹಿಂದಕ್ಕೆ ತಳ್ಳಲಾಯಿತು ಮತ್ತು ಹಝ್ರತ್ ಪೈಗಂಬರ್(ಸ) ಯುದ್ಧಭೂಮಿಯಲ್ಲಿ ಏಕಾಂಗಿಯಾಗಿ ಉಳಿದಿದ್ದರು. ಅದೇ ಪರಿಸ್ಥಿತಿಯಲ್ಲಿ, ಹಝ್ರತ್ ಪೈಗಂಬರ್(ಸ) ಅವರ 'ಖೌದ್' (ಯುದ್ಧದ ಸಂದರ್ಭದಲ್ಲಿ ಯೋಧರು ಧರಿಸುವ ಟೋಪಿ) ಮೇಲೆ ಕಲ್ಲು ಬಿದ್ದಿತು, ಇದರಿಂದಾಗಿ ಆ ಖೌದ್‌ನ ಮೊಳೆಗಳು ಅವರ ತಲೆಯಲ್ಲಿ ಚುಚ್ಚಿದವು ಆದ ಕಾರಣ ಇಸ್ಲಾಮಿನ ಸೈನ್ಯಕ್ಕೆ ಹಾನಿ ಮಾಡಲು ಕೆಲವು ದುಷ್ಟರು ಅಗೆದು ಮುಚ್ಚಿದ ಗುಂಡಿಯಲ್ಲಿ ಹಝ್ರತ್ ಪೈಗಂಬರ್(ಸ)ರು ಪ್ರಜ್ಞಾಹೀನನಾಗಿ ಬಿದ್ದರು. ಅದರ ನಂತರ, ಇತರ ಕೆಲವು ಸಹಾಬಿಗಳು ಹುತಾತ್ಮರಾದರು ಮತ್ತು ಅವರ ದೇಹಗಳನ್ನು ಹಝ್ರತ್ ಪೈಗಂಬರ್(ಸ) ರವರ ಶರೀರದ ಮೇಲೆ ಬಿದ್ದವು. ಮತ್ತು ಹಝ್ರತ್ ಪೈಗಂಬರ್(ಸ) ಶಹೀದ್ ಆಗಿದ್ದಾರೆಂದು ಜನರಲ್ಲಿ ಪ್ರಸಿದ್ಧಗೊಳಿಸಿರು. ಆದರೆ ಅವಿಶ್ವಾಸಿಗಳ ಸಮೂಹದಿಂದ ಹಿಂದಕ್ಕೆ ತಳ್ಳಲ್ಪಟ್ಟ ಆ ಸಹಚರರು, ಅವಿಶ್ವಾಸಿಗಳು ಹಿಮ್ಮೆಟ್ಟಿದ ತಕ್ಷಣ, ಹಝ್ರತ್ ಪೈಗಂಬರ್(ಸ)ರ ಸುತ್ತಲೂ ಒಟ್ಟುಗೂಡಿದರು ಮತ್ತು ಅವರನ್ನು ಗುಂಡಿಯಿಂದ ಹೊರತೆಗೆದರು. ಸ್ವಲ್ಪ ಸಮಯದ ನಂತರ, ಹಝ್ರತ್ ಪೈಗಂಬರ್(ಸ) ಅವರ ಪ್ರಜ್ಞೆ ಮರಳಿ ಪಡೆದು ಪುನಃ ಅವರು ಮುಸ್ಲಿಮರನ್ನು ಒಟ್ಟುಗೂಡಿಸಲು ಮೈದಾನದ ಸುತ್ತಲೂ ಜನರನ್ನು ಕಳುಹಿಸಿದರು ಮತ್ತು ಹಝ್ರತ್ ಪೈಗಂಬರ್(ಸ)ರು ಅವರೆಲ್ಲರನ್ನು ಕರೆದುಕೊಂಡು ಪರ್ವತದ ಬುಡಕ್ಕೆ ಹೋದರು.

ಸತ್ಯನಿಷೇಧಿಗಳ ಮೇಲೆ ವಿಜಯದ ನಂತರ ಒಂದು ತಾತ್ಕಾಲಿಕ ಸೋಲಿನ ಸ್ಥಿತಿ ಉಂಟಾಗಲು ಕಾರಣವೇನೆಂದರೆ, ಕೆಲವು ಜನರು ಹಝ್ರ‌ತ್ ಪೈಗಂಬರ್(ಸ)ರ ಒಂದು ಆದೇಶಕ್ಕೆ ವಿರುದ್ಧವಾಗಿ ನಡೆದಿದ್ದರು ಮತ್ತು ಹಝ್ರ‌ತ್ ಪೈಗಂಬರ್(ಸ)ರ ನಿರ್ದೇಶನಕ್ಕೆ ವಿರುದ್ಧವಾಗಿ ಅವರ ನಿರ್ದೇಶನವನ್ನು ಸ್ವತಃ ವ್ಯಾಖ್ಯಾನಿಸಲು ಶುರುಮಾಡಿದರು.

ಹೃದಯಮಿಡಿತಕ್ಕೆ ಅನುಸಾರವಾಗಿ ನಾಡಿಮಿಡಿತ ಇರುವ ರೀತಿಯಲ್ಲಿ ಆ ಜನರು ಮುಹಮ್ಮದ್ ರಸೂಲುಲ್ಲಾಹ್(ಸ)ರನ್ನು ಅನುಸರಿಸುತ್ತಿದ್ದರೆ, ಮುಹಮ್ಮದ್ ರಸೂಲುಲ್ಲಾಹ್(ರ)ರ ಆದೇಶವನ್ನು ಅನುಸರಿಸಲಿಕ್ಕಾಗಿ ಪೂರ್ತಿ ಲೋಕಜನರಿಗೆ ತಮ್ಮ ಜೀವಗಳನ್ನು ತ್ಯಾಗ ಮಾಡಬೇಕಾಗಿ ಬಂದರೂ ಅದು ಸಣ್ಣದಾದ ಸಂಗತಿಯಾಗಿದೆ ಎಂದು ಅವರು ಮನವರಿಕೆ ಮಾಡಿದ್ದರೆ, ಹಝ್ರ‌ತ್ ಪೈಗಂಬರ್(ಸ)ರ ಆದೇಶವನ್ನು ಸ್ವತಃ ವ್ಯಾಖ್ಯಾನಿಸದೇ ಆ ಪರ್ವತದ ಪ್ರದೇಶವನ್ನು ಬಿಡದೇ ಇರುತ್ತಿದ್ದರೆ, ಶತ್ರುಗಳಿಗೆ ಪುನಃ ದಾಳಿ ನಡೆಸಲು ಸಂದರ್ಭ ಲಭಿಸುತ್ತಿರಲಿಲ್ಲ ಮತ್ತು ಹಝ್ರ‌ತ್ ಪೈಗಂಬರ್(ಸ) ಹಾಗೂ ಅವರ ಸಹಾಬಿಯರಿಗೆ ಯಾವುದೇ ನಷ್ಟ ಉಂಟಾಗುತ್ತಿರಲಿಲ್ಲ.

(ತಫ್ಸೀರ್ ಕಬೀರ್, ಸಂಪುಟ 6, ಪುಟಗಳು 411-410)

ಆದ್ದರಿಂದ ಅಲ್ಲಾಹನು ಹೇಳುತ್ತಾನೆ: ನೀವು ಆದೇಶಕ್ಕೆ ವಿರುದ್ಧವಾಗಿ ನಡೆದ ಕಾರಣದಿಂದ ಈ ನಷ್ಟ ಉಂಟಾಯಿತು.

ಸೂರಃ ಕೌಸರಿನ ವ್ಯಾಖ್ಯಾನದಲ್ಲೂ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಈ ಘಟನೆಯ ಬಗ್ಗೆ ವಿಶದವಾಗಿ ಪ್ರಸ್ತಾಪಿಸಿದ್ದಾರೆ. ಉಹುದ್ ಯುದ್ಧದ ಸಂದರ್ಭದಲ್ಲಿ ಅಲ್ಲಾಹನು ಮುಸ್ಲಿಮರಿಗೆ ವಿಜಯವನ್ನು ನೀಡಿದನು ಮತ್ತು ಸತ್ಯವಿಶ್ವಾಸಿಗಳು ಓಡಿಹೋದರು. ಇಸ್ಲಾಮಿನ ಮಹಾನ್ ಸೇನಾಧಿಪತಿಗಳಾಗಿದ್ದ ಖಾಲಿದ್ ಬಿನ್ ವಲೀದ್ ಮತ್ತು ಅಮ್ರು ಬಿನ್ ಆಸ್ ಇನ್ನೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿರಲಿಲ್ಲ ಅವರು ಅವಿಶ್ವಾಸಿಗಳ ಪರವಾಗಿ ಈ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಪೈಗಂಬರ್(ಸ)ರು ಸಹಾಬಿಗಳ ಒಂದು ತೊಕಡಿಯನ್ನು ಪರ್ವತದ ಹಾದಿಯಲ್ಲಿ ನೇಮಿಸಿ ಅವರಿಗೆ ಹೀಗೆ ನಿರ್ದೇಶನವನ್ನು ನಿಡಿದ್ದರು, ನಾವು ವಿಜಯಶಾಲಿಯಾದರೂ ಅಥವಾ ಸೋತರೂ ನೀವು ಆ ಸ್ಥಳದಿಂದ ಕದಲಬಾರದು. ನಾವು ಬದುಕಿರಲಿ ಅಥವಾ ಮರಣ ಹೊಂದಲಿ ನೀವು ಈ ಜಾಗದಿಂದ ಕದಲಬಾರದು. ಮುಸ್ಲಿಮರಲ್ಲಿ ಜಿಹಾದ್ ಬಗ್ಗೆ ಅಪಾರ ಉತ್ಸಾಹವಿತ್ತು ಮತ್ತು ಈಗಲೂ ಇದೆ. ಇಸ್ಲಾಂ ವಿಜಯಿಯಾದಾಗ, ಈ ಹಾದಿಯಲ್ಲಿ ನಿಂತಿದ್ದವರು ತಮ್ಮ ಅಧಿಕಾರಿಯನ್ನು ಜಿಹಾದ್‌ನಲ್ಲಿ ಸ್ವಲ್ಪ ಭಾಗವಹಿಸಲು ನಮಗೆ ಅನುಮತಿಸುವಂತೆ ಕೇಳಿದರು. ಇಸ್ಲಾಂ ವಿಜಯಶಾಲಿಯಾಗಿದೆ ಮತ್ತು ಈಗ ಯಾವ ಅಪಾಯವಿಲ್ಲ ಎಂದು ಹೇಳಿದರು. ಅದಕ್ಕೆ ಅವರ ನಾಯಕರು ಅವರಿಗೆ ಹೇಳಿದರು ಸೋಲು-ಗೆಲುವು ಏನೇ ಇರಲಿ ನೀವು ಇಲ್ಲಿಂದ ಕದಲಬಾರದು ಎಂದು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದಾರೆ. ನಾವು ಸಾಯಲಿ ಅಥವಾ ಬದುಕಿರಲಿ ನಾವು ಈ ಸ್ಥಳದಿಂದ ಕದಲಬಾರದು. ಅದಕ್ಕೇ ನಾವು ಇಲ್ಲೇ ಇರಬೇಕು ಎಂದು ಹೇಳಿದರು. ಅದಕ್ಕೆ ಅವರು ಮತ್ತೆ ಹೇಳಿದರು ಹಝ್ರತ್ ಪೈಗಂಬರ್(ಸ)ರ ಉದ್ದೇದ ಇದಾಗಿರಲಿಲ್ಲ ಬದಲಿಗೆ ಹಝ್ರತ್ ಪೈಗಂಬರ್(ಸ)ರು ನಮ್ಮನ್ನು ಪ್ರತಿಬಂಧಕರಾಗಿ ನಿಲ್ಲಿಸಿದ್ದಾರೆ. ಶತ್ರು ಈಗ ಓಡಿಹೋಗಿದ್ದಾನೆ ಮತ್ತು ಇಸ್ಲಾಂ ವಿಜಯ ಶಾಲಿಯಾಗಿದೆ. ಈಗ ನಾವು ಈ ಸ್ಥಳವನ್ನು ಬಿಟ್ಟು ಜಿಹಾದ್‌ನಲ್ಲಿ ಸ್ವಲ್ಪ ಭಾಗವಹಿಸುವುದರಿಂದ ಯಾವುದೇ ಹಾನಿ ಇಲ್ಲ. ಅದಕ್ಕೆ ಅಧಿಕಾರಿ ಹೇಳಿದರು, "ಮತ್ತೆ ಅಧಿಕಾರಿಗಳು ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದರು." "ಆಡಳಿತಗಾರನು ಆದೇಶವನ್ನು ನೀಡಿದಾಗ, ಅಧೀನದಲ್ಲಿರುವವರಿಗೆ ತನ್ನ ಬುದ್ಧಿಶಕ್ತಿಯನ್ನು ಬಳಸುವ ಹಕ್ಕಿಲ್ಲ ಎಂದು ಅಧಿಕಾರಿ ಹೇಳಿದರು" ಎಂದು ಹೇಳಲಾಗುತ್ತದೆ. ಇಲ್ಲಿಂದ ಕದಲಬೇಡಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಗೆಲುವೇ ಆಗಲಿ ಅಥವಾ ಸೋಲಾಗಲಿ. ನಾವು ಸಾಯಲಿ ಅಥವಾ ಬದುಕಿರಲಿ ಈ ಸ್ಥಳದಿಂದ ಕದಲಬಾರದು ಎಂದು ಒತ್ತಾಯಿಸಿದರು. ಆದ್ದರಿಂದ, ಹಝ್ರತ್ ಪೈಗಂಬರ್(ಸ)ರ ಸೂಚನೆಗಳ ಪ್ರಕಾರ, ನಾವು ಇಲ್ಲಿಯೇ ಉಳಿಯಬೇಕು. ಆದರೆ ಅವರು ಇದನ್ನು ಒಪ್ಪದೆ ತಮ್ಮ ತಪ್ಪನ್ನು ಎಷ್ಟು ಒತ್ತಾಯಿಸಿದರು ಎಂದರೆ ಅವರು ಕೊನೆಗೆ ತಮ್ಮ ಅಧಿಕಾರಿಗೆ ಹೇಳಿದರು. ನೀವು ಇಲ್ಲಿಯೇ ಇರಿ, ನಾವು ಹೋಗುತ್ತೇವೆ. ಹೀಗೆ ಅವರಲ್ಲಿ ಅನೇಕರು ಅಲ್ಲಿಂದ ಓಡಿಹೋದರು. ಕೇವಲ ಅಧಿಕಾರಿ ಹಾಗೂ ಅವರ ಕೆಲವು ಸಂಗಡಿಗರು ಉಳಿದಿದ್ದರು. ಅವಿರ್ಶವಾಸಿಗಳ ಸೈನ್ಯವು ಓಡಿಹೋದಾಗ. ಖಾಲಿದ್ ಬಿನ್ ವಲೀದ್ ಬಹಳ ಬುದ್ಧಿವಂತ ಮತ್ತು ಚಾಣುಕ್ಷ ವ್ಯಕ್ತಿಯಾಗಿದ್ದರು. ಅವರು ಇಸ್ಲಾಂನಲ್ಲಿ ಅದ್ಭುತವಾದ ಕೆಲಸಗಳನ್ನು ಮಾಡಿದ್ದಾರೆ ಮತ್ತು ಅವರು ಅವಿಶೌಆಸಿಯಾಗಿದ್ದಾಗ ಮಹಾನ್ ಸೇನಾಧಿಪತಿಯಾಗಿದ್ದರು. ಅವರು ತಮ್ಮ ಸೈನ್ಯದೊಂದಿಗೆ ಓಡಿಹೋಗುವಾಗ, ಇದ್ದಕ್ಕಿದ್ದಂತೆ ಅವರ ಕಣ್ಣುಗಳು ಈ ಹಾದಿಯ ಮೇಲೆ ಬಿದ್ದು ಅದನ್ನು ಖಾಲಿಯಾಗಿ ನೋಡೊದರು. ಅಮ್ರ್ ಬಿನ್ ಅಲ್-ಆಸ್ ಸಹ ಅವರೊಂದಿಗೆ ಇದ್ದರು. ಅವರು ಉಮರ್‌ಗೆ ಹೇಳಿದರು, ನಮಗೆ ಉನ್ನತ ಸಂದರ್ಭ ಲಭಿಸಿದೆ. ಉಮ್ರ್ ಕೂಡ ಈ ದಿಕ್ಕಿಗೆ ನೋಡಿದರು ಮತ್ತು ಇಬ್ಬರೂ ತಮ್ಮ ತಮ್ಮ ತಂಡಗಳೊಂದಿಗೆ ಮರಳಿದರು. ಖಾಲಿದ್ ಬಿನ್ ವಲೀದ್ ಒಂದು ಕಡೆಯಿಂದ ಹಾದಿಯನ್ನು ಮತ್ತು ಇನ್ನೊಂದು ಕಡೆಯಿಂದ ಅಮ್ರೋ ಬಿನ್ ಆಸ್ ಇನ್ನೊಂದು ಕಡೆಯಿಂದ ಹಾದಿಯ ಮೇಲೆ ದಾಳಿ ನಡೆಸಿದರು. ಮತ್ತು ಹಾದಿಯಲ್ಲಿದ್ದ ಕೆಲವು ಪುರುಷರನ್ನು ಕೊಂದ ನಂತರ, ಅವರು ಹಿಂಬದಿಯಿಂದ ಮುಸ್ಲಿಮರ ಮೇಲೆ ದಾಳಿ ಮಾಡಿದರು. ಈ ಹಾದಿಯಿಂದ ಮುಸ್ಲಿಮರು ತಮ್ಮನ್ನು ತಾವು ಸುರಕ್ಷಿತವೆಂದು ಪರಿಗಣಿಸಿದರು ಮತ್ತು ಚದುರಿಹೋಗಿದ್ದರು, ಪಂಕ್ತಿಗಳು ಮುರಿದು ಹೋಗಿದ್ದವು ಮತ್ತುಳಿದ ಶತ್ರುಗಳು ಹಿಂಬಾಲಿಸಿದರು ಖಾಲಿದ್ ಬಿನ್ ವಾಲಿದ್ ಮತ್ತು ಉಮ್ರು ಬಿನ್ ಆಸ್ ಅವರ ಹಿಂಭಾಗದಲ್ಲಿ ದಾಳಿ ಮಾಡಿದಾಗ ಒಬ್ಬೊಬ್‌ಬ ಮುಸ್ಲಿಮನು ಇಡೀ ಸಂಪೂರ್ಣ ತುಕಡಿಯ ಮುಂದೆ ಇದ್ದನು. ಕೆಲವು ಮುಸ್ಲಿಮರು ಕೊಲ್ಲಲ್ಪಟ್ಟರು ಮತ್ತು ಕೆಲವರು ಗಾಯಗೊಂಡರು ಮತ್ತು ಉಳಿದವರ ಪಾದಗಳು ಹರಿದವು, ವಿಶೇಷವಾಗಿ ಶತ್ರುಗಳ ದಾಳಿತ್ತು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ತಲುಪಿದಾಗ ಅವರ ಬಳಿ ಕೇವಲ ಹನ್ನೆರಡು ಜನರು ಮಾತ್ರ ಇದ್ದರು. ಅವರಿಬ್ಬರು ಸೇನಾಧಿಪತಿಗಳು ಅಂದರೆ ಖಾಲಿದ್ ಬಿನ್ ವಲೀದ್ ಮತ್ತು ಅಮ್ರೋ

ಬಿನ್ ಆಸ್ ಅವರು ತಮ್ಮ ಇತರ ಅಧಿಕಾರಿಗಳಿಗೆ ನೀವು ಕೂಡ ದಾಳಿ ಮಾಡಬೇಕೆಂದು ತಿಳಿಸಿದ್ದರು. ಆದ್ದರಿಂದ ಮೂರು ಸಾವಿರ ಸೈನ್ಯವು ಕೂಗುತ್ತಾ ಬಂದಿತು. ಆ ಸಮಯದಲ್ಲಿ, ಶತ್ರುಗಳಿಂದ ಕಲ್ಲುಗಳನ್ನು ಎಸೆಯಲಾಯಿತು. ಬಾಣಗಳ ಮಳೆ ಸುರಿಯುತ್ತಿತ್ತು. ಕತ್ತಿಗಳು ಓಡುತ್ತಿದ್ದವು ಮತ್ತು ಇಡೀ ಇಸ್ಲಾಮಿನ ಸೈನ್ಯವು ಉನ್ಮಾದಗೊಂಡಿತು. ಅಂತಹ ಪರಿಸ್ಥಿತಿಯಲ್ಲಿ, ಸಹಚರರು ದೊಡ್ಡ ತ್ಯಾಗ ಮಾಡಿದರು, ಆದರೆ 3,000 ಹೊಸ ಸೈನ್ಯದ ಮುಂದೆ ಅದನ್ನು ಸಹಿಸಲಾಗಲಿಲ್ಲ.

ಈ ದಾಳಿಯಲ್ಲಿ, ಹಝ್ರತ್ ಪೈಗಂಬರ್(ಸ) ಅವರ ಎರಡು ಹಲ್ಲುಗಳು ಮುರಿದುಹೋದವು ಮತ್ತು ಅವರ ಖೌದ್‌ಗೆ ಕಲ್ಲು ಬಡಿಯಿತು, ಇದರಿಂದಾಗಿ ಅದರ ಒಂದು ಮೊಳೆ ಹಝ್ರತ್ ಪೈಗಂಬರ್(ಸ)ರ ತಲೆಗೆ ಚುಚ್ಚಿತು. ಇದರಿಂದಾಗಿ ಅವರು ಪ್ರಜ್ಞಾಹೀನರಾಗಿ ಗುಂಡಿಗೆ ಬೀಳುತ್ತಾರೆ. ಅವರ ಪಕ್ಕದಲ್ಲಿ ನಿಂತಿದ್ದ ಸಹಾಬಿಗಳ ದೇಹಗಳು ಅವರ ಮೇಲೆ ಬಿದ್ದವು ಮತ್ತು ಅವರ ಪವಿತ್ರ ದೇಹವನ್ನು ಕೆಳಗೆ ಮರೆಯಾಯಿತು ಮತ್ತು ಹಝ್ರತ್ ಪೈಗಂಬರ್(ಸ) ಶಹೀದ್ ಆಗಿದ್ದಾರೆ ಎಂದು ಮುಸ್ಲಿಮರಲ್ಲಿ ಶಬ್ದವಾಯಿತು. ಈ ಸುದ್ದಿಯಿಂದ ಮುಸ್ಲಿಮರ ಪಾದಗಳು ಈಗಾಗಲೇ ಕಿತ್ತುಹೋದವು, ಅದು ಅವರ ಪ್ರಾಣವನ್ನು ಕಳೆದುಕೊಳ್ಳುವಂತೆ ಮಾಡಿತು, ಆದರೆ ಅಲ್ಲಾಹನ ವಿಧಿಯಗಿತ್ತು, ಹಝ್ರತ್ ಪೈಗಂಬರ್(ಸ) ಅವರು ಶಹೀದ್ ಆಗಿದ್ದಾರೆ ಎಂದು ಅವಿಶ್ವಾಸಿಗಳಲ್ಲಿ ಸುದ್ದಿ ತಿಳಿದಾಗ ಅವರು ಹೆಚ್ಚು ದಾಳಿ ಮಾಡಲಿಲ್ಲ. ಆದರೆ ತ್ವರಿತವಾಗಿ ಮಕ್ಕಾಗೆ ಹಿಂತಿರುಗಿ ಮತ್ತು ಹಝ್ರತ್ ಪೈಗಂಬರ್(ಸ)ರು ಕೊಲ್ಲಲ್ಪಟ್ಟರು ಎಂಬ ಶುಭವಾರ್ತೆಯನ್ನು ಜನರಿಗೆ ತಿಳಿಸುವುದು ಸೂಕ್ತವೆಂದು ಭಾವಿಸಿದರು. (ತಫ್ಸೀರ್ ಕಬೀರ್, ಸಂಪುಟ 10, ಪುಟಗಳು 340–341, ಸೂರತುಲ್ ಕೌಸರ್ ಆಯತ್ 2)

ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಸ್ಥಿರಚಿತ್ತತೆಯ ಬಗ್ಗೆ ಮಿಖ್‌ದಾದ್ ಬಿನ್ ಅಮ್ರ್(ರ) ಹೀಗೆ ಹೇಳುತ್ತಾರೆ: ಅಲ್ಲಾಹನಾಣೆ, ಮುಶ್ರಿಕರು ಕೊಲೆಗಳನ್ನು ನಡೆಸಿದರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಗಾಯಾಳುಗೊಳಿಸಿದರು.

ಕೇಳಿರಿ, ಹಝ್ರತ್ ಪೈಗಂಬರ್(ಸ)ರನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನ ಆಣೆಯನ್ನು ಹಾಕಿಕೊಂಡು ಹೇಳುತ್ತೇನೆ, ಹಝ್ರತ್ ಪೈಗಂಬರ್(ಸ) ಒಂದು ಅಂಗುಲದಷ್ಟು ಕೂಡ ಹಿಂದೆ ಸರಿಯಲಿಲ್ಲ ಮತ್ತು ಅವರು ಶತ್ರುಗಳ ನೇರ ಮುಂದೆ ನಿಂತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರ ಸಹಾಬರ ಒಂದು ಗುಂಪು ಒಮ್ಮೆ ಅವರ ಬಳಿಗೆ ಹಿಂತಿರುಗುತ್ತಿತ್ತು ಮತ್ತೆ ದಾಳಿಯ ಬಲದಿಂದ ಬೇರ್ಪಡುತ್ತಿತ್ತು. ಅಂದರೆ, ನಾಸ್ತಿಕರು ದಾಳಿ ಮಾಡಿದಾಗ, ಸಹಾಬರವರು ಚದುರಿಹೋಗುತ್ತಿದ್ದರು ಮತ್ತೆ ಪುನಃ ಹಿಂದಿರುಗುತ್ತಿದ್ದರು. ಹೀಗೆ ಅವರು ಮುಶ್ರಿಕೀನರನ್ನು ಹಿಂದಕ್ಕೆ ಸರಿಸಲು ಕೆಲವೊಮ್ಮೆ ಎದ್ದುನಿಂತು ತಮ್ಮ ಬಿಲ್ಲಿನಿಂದ ಬಾಣಗಳನ್ನು ಹೊಡೆಯುತ್ತಿದ್ದರು ಮತ್ತು ಕಲ್ಲುಗಳನ್ನು ಎಸೆಯುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರು ಸಹಾಬರ ಗುಂಪಿನೊಂದಿಗೆ ಸ್ಥಿರವಾಗಿ ನಿಂತರು.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ತನ್ನ ಜಾಗದಲ್ಲಿ ಸ್ಥಿರವಾಗಿ ಇದ್ದರು ಮತ್ತು ಶತ್ರುಗಳಿಗೆ ನೇರವಾಗಿ ನಿಂತು ಹೋರಾಡುತ್ತಿದ್ದರು ಮತ್ತು ತನ್ನ ಬಿಲ್ಲಿನಿಂದ ಶತ್ರುಗಳ ಕಡೆಗೆ ಬಾಣಗಳನ್ನು ತೂರುತ್ತಿರುವುದನ್ನು ಮುಂದುವರೆಸಿದರು ಮತ್ತು ಅದರ ತಂತಿಯು ಮುರಿದು ಹಝ್ರತ್ ಪೈಗಂಬರ್(ಸ)ರ ಕೈಯಲ್ಲಿ ಉಳಿಯಿತು. ಉಕಾಶ ಬಿನ್ ಮುಹ್ಸಿನ್ ರವರು ಹಝ್ರತ್ ಪೈಗಂಬರ್(ಸ) ಅವರಿಂದ ತಂತಿಯನ್ನು ಕಟ್ಟಲು ಆ ಬಿಲ್ಲನ್ನು ತೆಗೆದುಕೊಂಡರು, ಅವರು ಹೇಳಿದರು ಯಾ ರಸೂಲಲ್ಲಾಹ್(ಸ)!! ತಂತಿಯು ಪೂರ್ಣಗೊಳ್ಳುತ್ತಿಲ್ಲ, ಆದ್ದರಿಂದ ಹಝ್ರತ್ ಪೈಗಂಬರ್(ಸ)ರು ಅದನ್ನು ಎಳೆಯಿರಿ ಅದು ಪೂರ್ಣಗೊಳ್ಳುತ್ತದೆ ಎಂದು ಹೇಳಿದರು. ಉಕಾಶ ಹೇಳುತ್ತಾರೆ ಅಲ್ಲಾಹನ ಆಣೆ! ನಾನು ಅದನ್ನು ಎಳೆದಾ ಅದು ಪೂರ್ಣವಾಯಿತು ಮತ್ತು ನಾನು ಬಿಲ್ಲಿನ ಮರದ ಮೇಲೆ ಆ ತಂತಿಯನ್ನು ಎರಡು ಮೂರು ಬಾರಿ ಸುತ್ತಿ ಕಟ್ಟಿದೆ. ಒಂದೋ ಅದು ಪೂರ್ಣವಾಗುತ್ತಿರಲಿಲ್ಲ ಅಥವಾ ಅದು ಈಡೇರಿದ್ದು ಪವಾಡವಾಗಿತ್ತು.

ನಂತರ ಹಝ್ರತ್ ಪೈಗಂಬರ್(ಸ)ರವರು ಅವರ ಬಿಲ್ಲನ್ನು ಹಿಡಿದುಕೊಂಡು ಬಾಣಗಳನ್ನು ಹೊಡೆಯುವುದನ್ನು ಮುಂದುವರೆಸಿದರು ಮತ್ತು ಕೊನೆಗೆ ಬಾಣಗಳು ಕೊನೆಗೊಂಡುವು. ಆ ಬಿಲ್ಲನ್ನು ಖತಾದ ಬಿನ್ ನುಅ್‌ಮಾನ್ ಪಡೆದರು ಮತ್ತು ಸದಾ ಕಾಲಕ್ಕೆ ಅದು ಅವರ ಬಳಿಯಲ್ಲಿತ್ತು.

ನಾಫಿಅ್ ಬಿನ್ ಜುಬೈರ್(ರ) ಹೇಳುತ್ತಾರೆ: ಮುಹಾಜಿರುಗಳಲ್ಲಿ ಒಬ್ಬ ವ್ಯಕ್ತಿ ಹೀಗೆ ಹೇಳುವುದನ್ನು ನಾನು ಆಲಿಸಿದ್ದೇನೆ, ಉಹುದ್ ಯುದ್ಧದಲ್ಲಿ ಎಲ್ಲೆಡೆಗಳಿಂದಲೂ ಬಾಣಗಳು ಬರುತ್ತಿದ್ದುವು ಮತ್ತು ಹಝ್ರತ್ ಪೈಗಂಬರ್(ಸ) ಶತ್ರುಗಳ ನಡುವೆ ಇದ್ದರು. ಎಲ್ಲ ಬಾಣಗಳು ಹಝ್ರತ್ ಪೈಗಂಬರ್(ಸ)ರಿಗೆ ತಟ್ಟದೇ ದೂರ ಹೋಗುತ್ತಿದ್ದುವು. ಅಬ್ದುಲ್ಲಾಹ್ ಬಿನ್ ಶಿಹಾಬ್ ಝ್ಹೊಹ್‌ರಿ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರನ್ನು ನಮ್ಮಿಂದ ಸುರಕ್ಷಿತಗೊಳಿಸಲಾಗಿತ್ತು. ಅಲ್ಲಾಹನಾಣೆ, ನಾವು ನಾಲ್ವರು ಮಕ್ಕದಿಂದ ಹೊರಟಿದ್ದೆವು. ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಶಪಥ ಮಾಡಿಕೊಂಡಿದ್ದೆವು. ಆದರೆ ನಮಗೆ ಅವರ ಬಳಿಗೆ ತಲುಪಲು ಸಾಧ್ಯವಾಗಲಿಲ್ಲ.

ಇಬ್ನೆ ಸಾದ್ ಹೇಳುತ್ತಾರೆ ಅಬು ನಮೀರ್ ಕಿನಾನಿ ಹೇಳಿದರು: ನಾನು ಉಹದ್‌ನಲ್ಲಿ ಮುಶ್ರಿಕೀನರೊಂದಿಗೆ ಸೇರಿಕೊಂಡೆ ಮತ್ತು ಆ ದಿನ ನಾನು ಐದು ಗುರಿಗಳನ್ನು ಮಾಡಿ ನನ್ನ ಬಾಣಗಳನ್ನು ಅವರ ಮೇಲೆ ಪ್ರಯೋಗಿಸುತ್ತಿದ್ದೆ. ನಾನು ಹಝ್ರತ್ ಪೈಗಂಬರ್(ಸ) ಅವರನ್ನು ನೋಡುತ್ತಿದ್ದೆ, ಅವರ ಸಹಾಬರವರು ಅವರನ್ನು ಸುತ್ತುವರೆದಿದ್ದಾರೆ ಮತ್ತು ಅವರ ಬಲ ಮತ್ತು ಎಡಕ್ಕೆ ಬಾಣಗಳು ಬೀಳುತ್ತಿವೆ. ಕೆಲವು ಬಾಣಗಳು ಅವರ ಮುಂದೆ ಬಿದ್ದವು, ಕೆಲವು ಅವರ ಹಿಂದೆ ಬಿದ್ದವು, ಆಗ ಸರ್ವಶಕ್ತನಾದ ಅಲ್ಲಾಹನು ನನಗೆ ಇಸ್ಲಾಮಿನ ಕಡೆಗೆ ಮಾರ್ಗದರ್ಶನ ನೀಡಿದನು. ನಂತರ ಇವರು ಮುಸ್ಲಿಮರಾದರು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ 4, ಪುಟಗಳು 196–197, ದಾರುಲದ ಕುತುಬ್ ಇಲ್‌ಮಿಯಾ ಬೈರುತ್)

ಇದಕ್ಕೆ ಸಂಬಂಧಿಸಿದಂತೆ, ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಮಕ್ಕಾ ಜೀವಿತ ಒಂದು ವಿಸ್ಮಯಕರವಾದ ಮಾದರಿಯಾಗಿತ್ತು." ಹಝ್ರತ್ ಪೈಗಂಬರ್(ಸ)ರವರ ಶೌರ್ಯವನ್ನು ಉಲ್ಲೇಖಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ "ಒಂದು ರೀತಿಯಲ್ಲಿ ಅವರ ಪೂರ್ತಿ ಜೀವಿತ ಕಷ್ಟತೆಗಳಿಂದ ಸಾಗಿತ್ತು. ಉಹುದ್ ಯುದ್ಧದಲ್ಲಿ ಅವರು ಒಬ್ಬಂಟಿಗರಾಗಿದ್ದರು. ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಸಂಬಂಧಿಸಿದಂತೆ ರಸೂಲುಲ್ಲಾಹ್ ಎಂದು ವ್ಯಕ್ತಪಡಿಸುವುದು ಹುಝೂರ್(ಸ)ರವರ ಶೌರ್ಯ, ಧೈರ್ಯ ಮತ್ತು ದೃಢತೆಯನ್ನು ತೋರಿಸುತ್ತದೆ. (ಮಲ್‌ಫೂಝಾತ್, ಸಂಪುಟ–2, ಪುಟ–309, 1984 ಆವೃತ್ತಿ)

ಎಂಥಹ ವೈರಿಗಳು ಸುತ್ತುವರೆದರೂ ನಾನಲ್ಲ ಎಂದು ಮರೆಮಾಚದೆ ಅವರು ಸ್ಪಷ್ಟವಾಗಿ ಘೋಷಿಸಿದರು. ಜನರಿಗೆ ತಿಳಿಯಿತು. ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ, "ಅಲ್ಲಾಹನ ಪ್ರವಾದಿಗಳು ಮತ್ತು ಸಂತರಿಗೆ ನೋವು ಯಹೂದಿಗಳ ಶಾಪ ಮತ್ತು ಅವಮಾನದಂತೆ ಅಲ್ಲಾಹನ ಶಿಕ್ಷೆ ಮತ್ತು ಅವನ ಅಸಮಾಧಾನವನ್ನು ವ್ಯಕ್ತಪಡಿಸಲಾಗುವ ರೀತಿಯಲ್ಲಿ ಸಂಭವಿಸುವುದಿಲ್ಲ, ಬದಲಿಗೆ ಪ್ರವಾದಿಗಳು ಧೈರ್ಯದ ಸಂಕೇತವಾಗಿರುತ್ತಾರೆ. ಸರ್ವಶಕ್ತನಾದ ಅಲ್ಲಾಹನಿಗೆ ಇಸ್ಲಾಮಿನೊಂದಿಗೆ ಯಾವುದೇ ದ್ವೇಷವಿರಲಿಲ್ಲ, ಆದರೆ ನೋಡಿ! ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗಿ ಉಳಿದರು. ಇದರ ರಹಸ್ಯವೇನೆಂದರೆ, ಹಝ್ರತ್ ಪೈಗಂಬರ್(ಸ)ರ ಧೈರ್ಯ ಜನರಿಗೆ ಗೊತ್ತಾಗಬೇಕು ಎಂದಾಗಿತ್ತು. ಆ ಸಂದರ್ಭದಲ್ಲಿ ಅವರು ಹತ್ತು ಸಾವಿರ ಶತ್ರುಗಳ ಮುಂದೆ ಒಬ್ಬಂಟಿಯಾಗಿ ನಿಂತಿದ್ದರು. ಆಗಲೂ 'ನಾನು ಅಲ್ಲಾಹನ ಪ್ರವಾದಿಯಾಗಿರುವೆನು' ಎಂದು ಅವರು ಘೋಷಿಸಿದರು. ಇಂತಹ ಮಾದರಿಯನ್ನು ತೋರಿಸಲು ಯಾವುದೇ ಪ್ರವಾದಿಗೆ ಸಂದರ್ಭ ಲಭಿಸಲಿಲ್ಲ." (ಮಲ್‌ಫೂಝಾತ್, ಸಂಪುಟ–2, ಪುಟ–172–173, 2022 ಆವೃತಿ)

ಪತ್ರಿಕೆಯ ಬರಹಗಾರರು ಬರೆದಿದ್ದಾರೆ: ಉಹುದಿನಲ್ಲಿ ಮೂರು ಸಾವಿರರ ಸಂಖ್ಯೆಯಲ್ಲಿ ಶತ್ರುಗಳಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಎರಡೂ ಯುದ್ಧಗಳ ಬಗ್ಗೆ ಒಟ್ಟಾಗಿ ಪ್ರಸ್ತಾಪಿಸಿರಬಹುದು. ಅಹ್‌ಝಾಬ್ ಯುದ್ಧದಲ್ಲೂ ಹತ್ತು ಸಾವಿರದಷ್ಟು ಸತ್ಯನಿಷೇಧಿಗಳಿದ್ದರು. ಬೇರೆ ಯುದ್ಧಗಳಲ್ಲೂ ಶತ್ರುಗಳು ಸಾಕಷ್ಟು ಸಂಖ್ಯೆಯಲ್ಲಿದ್ದರು. ಹೇಗಿದ್ದರೂ ಸತ್ಯನಿಷೇಧಿಗಳ ಮುಂದೆಯೂ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗಿ ನಿಂತರು ಎಂಬುದನ್ನು ಹೇಳಿ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಪೈಗಂಬರ್(ಸ)ರ ಧೈರ್ಯ ಮತ್ತು ಅವರ ಮಾದರಿಯನ್ನು ಸಾಬೀತುಗೊಳಿಸುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾವುದೇ ವಸ್ತುವಿನಲ್ಲಿ ಶಕ್ತಿಯನ್ನು ತುಂಬಿಸಲು ಅಲ್ಲಾಹನಿಗೆ ಸಾಮರ್ಥ್ಯವಿದೆ. ಅಲ್ಲಾಹನು ತನ್ನ ದರ್ಶನದ ಶಕ್ತಿಯನ್ನು ಅವನು ಯಾರೊಡನೆ ಸಂಭಾಷಣೆ ನಡೆಸುತ್ತಾನೋ ಅವರಲ್ಲಿ ತುಂಬಿಸಿದನು. ಈ ಸಂಭಾಷಣೆಗಾಗಿಯೇ ಪ್ರವಾದಿಗಳು ಅವರ ಜೀವಗಳನ್ನು ಅರ್ಪಿಸಿದರು. ಲೌಕಿಕನಾದ ಪ್ರೇಮಿ ಈ ರೀತಿಯಾಗಿ ಮಾಡುವನೇ? ಈ ಸಂಭಾಷಣೆಯ ಕಾರಣದಿಂದ ಈ ಮೈದಾನದಲ್ಲಿ ಕಾಲಿರಿಸಿದ ಪ್ರವಾದಿಗಳಲ್ಲಿ ಯಾರೂ ಹಿಂದೆ ಸರಿಯಲಿಲ್ಲ ಮತ್ತು ಅನಿಷ್ಟೆ ತೋರಿಸಲಿಲ್ಲ. ಎಂದರೆ, ಮಾಡಿದ ವಾದದಲ್ಲಿ ಸ್ಥಿರವಾಗಿ ನಿಲ್ಲುತ್ತಾರೆ.

ಉಹುದ್ ಯುದ್ಧದ ಘಟನೆಗೆ ಸಂಬಂಧಿಸಿ ಅನೇಕರು ವ್ಯಾಖ್ಯಾನಿಸಿದ್ದಾರೆ. ಆದರೆ ಸತ್ಯವೇನೆಂದರೆ, ಆ ಸಮಯದಲ್ಲಿ ಅಲ್ಲಾಹನ ಪ್ರತಾಪ ಪ್ರಕಟಗೊಳ್ಳುತ್ತಿತ್ತು. ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲದೇ ಬೇರೆ ಯಾರಿಗೂ ಅದನ್ನು ಸಹಿಸುವ ಶಕ್ತಿ ಇರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅಲ್ಲೇ ನಿಂತರು ಮತ್ತು ಇತರ ಸಹಾಬಿಯರು ಅಸ್ಥಿರಗೊಂಡರು. ಹಝ್ರತ್ ಪೈಗಂಬರ್(ಸ)ರ ಜೀವಿತದಲ್ಲಿ ಕಾಣುವಂತಹ ಸತ್ಯಸಂಧತೆ ಮತ್ತು ನಿಷ್ಠೆಯ ಉದಾಹರಣೆ ಎಲ್ಲೂ ಇಲ್ಲದ ರೀತಿಯಲ್ಲೇ ಅವರಿಗೆ ಲಭಿಸಿದ ದೈವಿಕ ಸಹಾಯಗಳ ಉದಾಹರಣೆ ಎಲ್ಲೂ ಕಾಣಲು ಸಾಧ್ಯವಲ್ಲ. (ಮಲ್‌ಫೂಝಾತ್, ಸಂಪುಟ–5, ಪುಟ–268, 2022)

ಉಳಿದ ಭಾಗವನ್ನು ಮುಂದಿನ ಖುತ್‌ಬ ಕಜುಮುಅದಲ್ಲಿ ವಿವರಿಸಲಾಗುವುದು, ಇನ್‌ಶಾಅಲ್ಲಾಹ್. ಈಗ ನಾನು ನಮ್ಮ ಜಮಾಅತ್ತಿನ ದೀರ್ಘಕಾಲದ ಸೇವಕ, ಮುಬಲ್ಲಿಗ್ ಡಾ. ಮುಹಮ್ಮದ್ ಜಲಾಲ್ ಶಾಮ್ಸ್ ಸಾಹಿಬ್‌ರ ಬಗ್ಗೆ ಮೊದಲು ಉಲ್ಲೇಖಿಸಲು ಬಯಸುತ್ತೇನೆ. ನಾನು ನಿನ್ನೆ ಅವರ ನಮಾಝ್‌ಜನಾಝುವನ್ನು ನಿರ್ವಹಿಸಿದ್ದೇನೆ, ಅವರ ಗುಣಲಕ್ಷಣಗಳ ಬಗ್ಗೆ ಇಂದು ಜುಮುಅದಲ್ಲಿ ಪ್ರಸ್ತಪಿಸಲು ಬಯಸುತ್ತೇನೆ. ಅವರು ಯೋಗ್ಯ, ಸಮರ್ಥ, ಸರಳ ಮತ್ತು ನಿಷ್ಠಾವಂತ ವಖ್ಫೇ ಝಿಂದಗಿ ಆಗಿದ್ದರು. ಇತ್ತೀಚೆಗೆ, ಅವರು ತಮ್ಮ 79 ನೇ ವಯಸ್ಸಿನಲ್ಲಿ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್ 1969 ರಲ್ಲಿ, ಅವರು ಜಾಮಿಯಾದಿಂದ ಉತ್ತಮ ಶ್ರೇಣಿಗಳೊಂದಿಗೆ ಶಾಹಿದ್ ಪದವಿಯನ್ನು ಪಡೆದರು ಮತ್ತು ಕೆಲವು ಕಾಲ ಪಾಕಿಸ್ತಾನದ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡಿದರು. ನಂತರ ಹಝ್ರತ್ ಖಲೀಫತುಲ್ ಮಾಸಿಹ್ ಸಾಲಿಸ್(ರಹ್) ರ ಸಲಹೆಯ ಮೇರೆಗೆ ಟರ್ಕಿಶ್ ಭಾಷೆಯನ್ನು ಕಲಿಯಲು ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ಕಳುಹಿಸಲಾಯಿತು. ನಂತರ ಅವರನ್ನು 1974 ರಲ್ಲಿ ಟರ್ಕಿಶ್ ಭಾಷೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಟರ್ಕಿಗೆ ಕಳುಹಿಸಲಾಯಿತು, ಅಲ್ಲಿಂದ ಅವರು ಟರ್ಕಿಶ್ ಭಾಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಪಿಎಚ್‌ಡಿ ಪದವಿ ಪಡೆದರು ಮತ್ತು ನಂತರ ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರಹ್) ರವರ ಸೂಚನೆಯ ಮೇರೆಗೆ ಯುಕೆ ಗೆ ಬಂದರು. ನಿಮಗೆ ಇಲ್ಲಿ ಗ್ರೇಟ್ ಬ್ರಿಟನ್‌ನಲ್ಲಿ ಮತ್ತು ನಂತರ ಜರ್ಮನಿಯಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಆದ್ದರಿಂದ ನಿಮ್ಮ ಬಗ್ಗೆ ಬರೆಯುತ್ತಿರುವ ವಿವಿಧ ಜನರು ಟರ್ಕಿಯಿಂದ ಮತ್ತು ಜರ್ಮನಿಯಿಂದ ಮತ್ತು ಯುಕೆಯಿಂದ ಬಂದವರು. ಅವರು ಸ್ನೇಹಿತರು ಮತ್ತು ಪರಿಚಯಸ್ಥರ ವ್ಯಾಪಕ ವಲಯವನ್ನು ಹೊಂದಿದ್ದರು. ಆದಾಗ್ಯೂ, ನಂತರ ಅವರನ್ನು ಬ್ರಿಟನ್‌ನಲ್ಲಿ ಟರ್ಕಿ ಡೆಸ್ಕ್‌ನ ಉಸ್ತುವಾರಿಯಾಗಿ ನೇಮಿಸಲಾಯಿತು ಮತ್ತು ಅವರ ಮರಣದವರೆಗೂ ಅವರು ಈ ಸ್ಥಾನದಲ್ಲಿ ಹೆಚ್ಚಿನ ಪ್ರಾಮಾಣಿಕತೆ ಮತ್ತು ಕಠಿಣ ಪರಿಶ್ರಮದಿಂದ ಸೇವೆ ಸಲ್ಲಿಸಿದರು. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಪರಿಪೂರ್ಣ ಮಟ್ಟದ ಬುದ್ಧಿವಂತಿಕೆ, ಬುದ್ಧಿವಂತಿಕೆ ಮತ್ತು ಒಳನೋಟವನ್ನು ಅನುಗ್ರಹಿಸಿದನು. ಟರ್ಕಿಯಲ್ಲಿ, ನೀವು ನಿಮ್ಮ ಟರ್ಕಿಶ್ ಭಾಷಾ ಪದವಿಯನ್ನು ಪಡೆದಾಗ, ಇಸ್ತಾನ್‌ಬುಲ್ ವಿಶ್ವವಿದ್ಯಾಲಯವು ನಿಮಗೆ ಪ್ರಾಧ್ಯಾಪಕರಾಗಿ ಕೆಲಸವನ್ನು ನೀಡಿತು, ಅದು ಉತ್ತಮ ಕೆಲಸವಾಗಿತ್ತು ಮತ್ತು ಸಂಬಳವು ಅಸಾಧಾರಣವಾಗಿತ್ತು. ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರಿಗೆ ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡುವಂತೆ ಕೇಳಿಕೊಂಡರು, ಆದ್ದರಿಂದ ಅವರು ಅದನ್ನು ಮಾಡಬೇಡಿ ಅಥವಾ ಮಾಡಿರಿ ಎಂದು ಹೇಳಲಿಲ್ಲ, ಬದಲಿಲಗೆ ನೀವು ಪ್ರಾರ್ಥನೆಯೊಂದಿಗೆ ನಿರ್ಧರಿಸಿರಿ ಮತ್ತು ಯೋಚನೆ ಮಾಡಿ ಬಹಳ ಎಚ್ಚರಿಕೆಯಿಂದ ನಿರ್ಧರಿಸಿರಿ ಎಂದು ಹೇಳಿದರು. ನಂತರ ಅವರು ಪ್ರಾರ್ಥಿಸಿದರು ಮತ್ತು ಅಸರ್ವಶಕ್ತನಾದ ಅಲ್ಲಾಹನಿಗೆ ತಮ್ಮ ವಖ್ಫ್‌ಗೆ ಆದ್ಯತೆ ನೀಡಿದರು ಮತ್ತು ಆ ಕೆಲಸವನ್ನು ನಿರಾಕರಿಸಿದರು. 2002 ರಲ್ಲಿ ಟರ್ಕಿಗೆ ಭೇಟಿ ನೀಡಿದಾಗ, ಅವರು ಇಸ್ಲಾಮ್ ಅಹ್ಮದಿಯತ್ ಬಗ್ಗೆ ತಬ್ಲೀಗ್ ಮಾಡಿದ ಕಾರಣಕ್ಕೆ ಅಪರಾಧಕ್ಕಾಗಿ ಇಬ್ಬರು ಸಹಚರರೊಂದಿಗೆ ಟರ್ಕಿಯಲ್ಲಿ ಜೈಲಿನಲ್ಲಿದ್ದರು ಮತ್ತು ನಾಲ್ಕೂವರೆ ತಿಂಗಳ ಕಾಲ ಜೈಲಿನಲ್ಲಿದ್ದರು.

ಅವರ ಪ್ರಮುಖ ಸಾಧನೆಗಳಲ್ಲಿ ಪವಿತ್ರ ಖುರ್‌ಆನ್ ಅನ್ನು ಅವರ ಸಹೋದ್ಯೋಗಿಗಳೊಂದಿಗೆ ಟರ್ಕಿಶ್ ಭಾಷೆಗೆ ಅನುವಾದಿಸಲಾಗಿದೆ. ಇದಲ್ಲದೆ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅನೇಕ ಪುಸ್ತಕಗಳನ್ನು ಭಾಷಾಂತರಿಸಲು ಮತ್ತು ಟರ್ಕಿಷ್ ಭಾಷೆಯಲ್ಲಿ ತರಬೇತಿ ಹಾಗೂ ತಬ್ಲೀಗಿ ಕರಪತ್ರಗಳು ಮತ್ತು ಪುಸ್ತಕಗಳನ್ನು ಬರೆಯಲು ಮತ್ತು ಪ್ರಕಟಿಸಲು ಸಾಧ್ಯವಾಯಿತು. ನೀವು ವಿದ್ವಾಂಸರಾಗಿದ್ದರು, ಪುಸ್ತಕಗಳನ್ನು ಓದಲು ಇಷ್ಟಪಡುತ್ತಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಖಲೀಫರ ಪುಸ್ತಕಗಳು ಮತ್ತು ಭಾಷಣಗಳನ್ನು ಬಹಳ ಹತ್ತಿರದಿಂದ ಅಧ್ಯಯನ ಮಾಡುತ್ತಿದ್ದರು. ಅವರು ಪುಸ್ತಕಗಳ ಮೇಲೆ ಮಾತ್ರ ಟಿಪ್ಪಣಿಗಳನ್ನು ತೆಗೆದುಕೊಳ್ಳುತ್ತಿದ್ದರು. ಜಮಾತಿನ ಪುಸ್ತಕಗಳಲ್ಲದೆ, ಪಕ್ಷೇತರರು ವಿವಿಧ ವಿಜ್ಞಾನ ಮತ್ತು ಕಲೆಗಳ ಪುಸ್ತಕಗಳನ್ನು ಓದಲು ಇಷ್ಟಪಡುತ್ತಿದ್ದರು. ಅವರು ಬಹಳ ಸ್ಪಷ್ಟವಾಗಿ ಮಾತನಾಡುವ ವ್ಯಕ್ತಿಯಾಗಿದ್ದರು ಮತ್ತು ಸ್ನೇಹಿತರು ಮತ್ತು ಪ್ರೀತಿಪಾತ್ರರ ಜೊತೆಯಲ್ಲಿ, ಅವರು ಪಾಂಡಿತ್ಯಪೂರ್ಣ ಸಂಭಾಷಣೆಯನ್ನು ನಡೆಸಿದಾಗ, ಅವರು ಅಂಶಗಳನ್ನು ಬಹಳ ವಿವರವಾಗಿ ವಿವರಿಸುತ್ತಿದ್ದರು. ಎಲ್ಲಿ ಕಷ್ಟ ಎದುರಾಗುತ್ತದೆಂಯೊ ಅಥವಾ ಅರ್ಥವಾಗದಿದ್ದಾಗ ಯಾವುದೇ ಅಹಂಕಾರವಿಲ್ಲದೆ ಕಿರಿಯ ಮುಬಲ್ಲಿಗ್‌ಗಳಿಂದ ಮಾರ್ಗದರ್ಶನ ಪಡೆಯುತ್ತಿದ್ದರು.

ಅವರು ಭಾಷೆಗಳನ್ನು ಕಲಿಯಲು ದೇವರು ನೀಡಿದ ಸಾಮರ್ಥ್ಯವನ್ನು ಹೊಂದಿದ್ದರು. ಉರ್ದು ಮತ್ತು ಪಂಜಾಬಿ ಮಾತೃಭಾಷೆಗಳಾಗಿದ್ದವು, ಇದಲ್ಲದೆ, ಅವರು ಟರ್ಕಿಶ್‌ನಲ್ಲಿ ಪಿಎಚ್‌ಡಿ ಪಡೆದರು ಮತ್ತು ಅಸಾಧಾರಣ ಕೌಶಲ್ಯಗಳನ್ನು ಪಡೆದರು. ಅವರು ಇಂಗ್ಲಿಷ್, ಅರೇಬಿಕ್, ಜರ್ಮನ್ ಮತ್ತು ಪರ್ಷಿಯನ್ ಭಾಷೆಗಳನ್ನು ಅದೇ ರೀತಿಯಲ್ಲಿ ಮಾತನಾಡುತ್ತಿದ್ದರು, ಅದಲ್ಲದೆ ಕೆಲವು ಸ್ಥಳಗಳಲ್ಲಿ ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್)ರವರ ಸಭೆಗಳಲ್ಲಿ ಅರೇಬಿಕ್ ಬಲ್ಲವರು ಯಾರೂ ಇಲ್ಲದಿದ್ದಾಗ ಅರೇಬಿಕ್ಗೆ ಅನುವಾದಿಸಿದರು. ಅವರು ಸರೈಕಿಯ ಭಾಷೆಯನ್ನೂ ಮಾತನಾಡುತ್ತಿದ್ದರು. ಅವರು ಖುತ್‌ಬದ ನಂತರ ತಕ್ಷಣವೇ ಖುತ್‌ಬವನ್ನು ಭಾಷಾಂತರಿಸುತ್ತಿದ್ದರು ಮತ್ತು ಟರ್ಕಿಶ್ ಮಾತನಾಡುವವರು ಅವರ ಟರ್ಕಿಶ್ ಭಾಷೆ ಮತ್ತು ಶಬ್ದಕೋಶವನ್ನು ಮೆಚ್ಚಿದರು. ಭಾಷಣೆ ಮತ್ತು ಬರವಣಿಗೆಯಲ್ಲಿ ಪರಿಣಿತಿ ಹೊಂದಿದ್ದರು. ಆದಾಗ್ಯೂ, ದಿವಂಗತರು ಅನೇಕ ಗುಣಗಳನ್ನು ಹೊಂದಿದ್ದರು. ಅಲ್ಲಾಹನ ಹಕ್ಕುಗಳು ಮತ್ತು ದಾಸರ ಹಕ್ಕುಗಳನ್ನು ಸಹ ಪರಿಪೂರ್ಣ ಪ್ರಮಾಣದಲ್ಲಿ ಈಡೇರಿಸುತ್ತಿದ್ದರು. ಸಂಬಂಧಿಕರು ಅಥವಾ ಸಂಬಂಧಿಕರಲ್ಲದವರು ಎಲ್ಲರೊಂದಿಗೂ ಬಹಳ ಪ್ರೀತಿ ವಾತ್ಸಲ್ಯದಿಂದ ಕಾಣುತ್ತಿದ್ದರು. ಅನೇಕ ಜನರು ನನಗೆ ಪತ್ರಗಳನ್ನು ಬರೆದಿದ್ದಾರೆ. ಅವರು ಸಹಾನುಭೂತಿ ಮತ್ತು ಪ್ರಾಮಾಣಿಕ ಜೀವಿಯಾಗಿದ್ದರು. ಭೇಟಿಯ ನಂತರ, ಅಳಿಸಲಾಗದ ನೆನಪುಗಳು ಉಳಿಯುತ್ತಿದ್ದವು. ಮುತವಕ್ಕುಲ್ ಅಲಲ್ಲಾಹ್ (ಅಲ್ಲಾಹನಲ್ಲಿ ಸಂಪೂರ್ಣ ವಿಶ್ವಾಸ ಹೊಂದಿದವರಾಗಿದ್ದರು) ಆಗಿದರು. ಅವರು ಮೌನವಾಗಿ ಬಡವರಿಗೆ, ನಿರ್ಗತಿಕರಿಗೆ ಸಹಾಯ ಮಾಡುತ್ತಿದ್ದರು. ಅವರು ಖಿಲಾಫತ್ ಬಗ್ಗೆ ಅಪಾರ ಪ್ರೀತಿ ಮತ್ತು ವಾತ್ಸಲ್ಯವನ್ನು ಹೊಂದಿದ್ದರು. ನಿಜವಾದ ಸ್ವಪ್ನಗಳನ್ನು ಕಾಣುತ್ತಿದ್ದರು. ಅವರು ಸಾಕಷ್ಟು ಧಿಕ್ರ್ ಮಾಡುತ್ತಿದ್ದರು. ಅಲ್ಲಾಹನು ಅವರ ಶ್ರೇಣಿಯನ್ನು ಹೆಚ್ಚಿಸಲಿ. ಅವರ ಮಕ್ಕಳು, ಅವರ ಪತ್ನಿ, ಎಲ್ಲರಿಗೂ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ ಮತ್ತು ಅವರು ತಮ್ಮ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ.

ಇತರ ಮೂರು ದಿವಂಗತರ ಬಗ್ಗೆ ಪ್ರಸ್ತಾಪಿಸಲಾಗುವುದು ಮತ್ತು ಅವರ ಜನಾಝ಼ ಗ಼ಾಯಿಬ್ ನಿರ್ವಹಿಸಲಾಗುವುದು. ಅವರಲ್ಲಿ, ಮೊದಲ ಉಲ್ಲೇಖವು ಮುಹಮ್ಮದ್ ಇಬ್ರಾಹಿಂ ಭಾಂಬ್ರಿ ಸಾಹಿಬ್ ಅವರದ್ದಾಗಿದೆ. ಅವರು 106 ನೇ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. ಇನ್ನಾ ಲಿಲ್ಲಾಃಇ ವ ಇನ್ನಾ ಇಲೈಹಿ ರಾಜಿಊನ್. ಪತ್ರಿಕೆಗಳಲ್ಲಿ ಕೆಲವು ಸ್ಥಳಗಳಲ್ಲಿ, ಅವರ ವಯಸ್ಸು 106 ವರ್ಷಗಳು ಎಂದು ಸಾಬೀತಾಗಿದೆ, ಕೆಲವು ಸ್ಥಳಗಳಲ್ಲಿ ಅದು 106–109 ವರ್ಷಗಳು ಎಂದಾಗಿದೆ. ಆದ್ದರಿಂದ ಕನಿಷ್ಠ ಅವರ ವಯಸ್ಸು ಹೇಗಾದರೂ ಇತ್ತು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಅವರು ಮುಸಿಯಾಗಿದ್ದರು ಮತ್ತು ಕುಟುಂಬದಲ್ಲಿ ಅಹ್ಮದಿಯತ್ ಅವರ ಪ್ರಭಾವವು ಅವರ ತಂದೆ ಚೌಧರಿ ಅಬ್ದುಲ್ ಕರೀಂ ಸಾಹಿಬ್ ಅವರಿಂದ ಬಂದಿತು, ಅವರು 1918–19 ರಲ್ಲಿ ಬೈಅತ್ ಮಾಡಲು ಸೌಭಾಗ್ಯ ಪಡೆದರು.

ಇಬ್ರಾಹಿಂ ಭಾಂಬ್ರಿ ಸಾಹಿಬ್ ಅವರು ತಮ್ಮ ತಂದೆಯ ಬೈಅತ್ ಅನ್ನು ಉಲ್ಲೇಖಿಸುತ್ತಾ ಬರೆಯುತ್ತಾರೆ: ಅಲ್ಲಾಹನ ಅನುಗ್ರಹದಿಂದ ಕುಟುಂಬದಲ್ಲಿ ಅಹ್ಮದಿಯ್ಯತ್ ನನ್ನ ತಂದೆಯ ಮೂಲಕ ಬಂದಿತು. ನನ್ನ ತಂದೆ ಮುಂಚೆ ಅಹ್ಲ್–ಎ–ಹದೀಸ್ ಪಂಥದೊಂದಿಗೆ ಸಂಬಂಧ ಹೊಂದಿದ್ದರು. 1918 ರಲ್ಲಿ, ಅವರ ದೃಷ್ಟಿ ತುಂಬಾ ದುರ್ಬಲವಾಯಿತು. ಕಣ್ಣಿನ ಪೊರೆ ರೋಗವಾಗಿತ್ತು. ಚಿಕಿತ್ಸೆಗಾಗಿ ಖಾದಿಯಾನ್ ನ ನೂರ್ ಆಸ್ಪತ್ರೆಗೆ ಬಂದಿದ್ದರು. ನನ್ನ ತಂದೆ ಸುಪ್ರಸಿದ್ದ ಆಗಿದ್ದರಿಂದ ಚೌಧರಿ ಅಬ್ದುಲ್ ಕರೀಂ ಸಾಹಿಬ್ ಆಸ್ಪತ್ರೆಗೆ ದಾಖಲಾದ ವಿಷಯ ತಿಳಿದ ಜನ ಅವರಿಗೆ ನೋಡಲು ಜನರು ಬರತೊಡಗಿದರು. ಮಾಸ್ಟರ್ ಅಬ್ದುಲ್ ರಹಮಾನ್ ಸಾಹಿಬ್ ಮೆಹರ್ ಸಿಂಗ್ ಮತ್ತು ಇತರ ಹಿರಿಯರೂ ಬರುತ್ತಿದ್ದರು ಮತ್ತು ಚೌಧರಿ ಸಾಹಿಬ್ ಅವರ ಸಲುವಾಗಿ ಬಹಳ ನಮ್ರತೆಯಿಂದ ನೋಡುತ್ತಿದ್ದರು. ಮತ್ತು ಈ ಹಿರಿಯರು ಈ ಜನರಿಗೆ ತಬ್ಲೀಗ್ ಅನ್ನು ಸಹ ಪ್ರಾರಂಭಿಸಿದರು. ಭಾಂಡಿ ಸಾಹಿಬ್ ಬರೆಯುತ್ತಾರೆ: ಹೀಗೆ ಹಝ್ರತ್ ಈಸಾ(ಅ) ಮರಣಹೊಂದಿದ್ದಾರೆ ಎಂಬ ವಿಷಯವು

ನಮ್ಮ ತಂದೆಯ ಮನಸ್ಸಿನಲ್ಲಿ ಚೆನ್ನಾಗಿ ಪರಿಹರಿಸಲಾಯಿತು. ಮತ್ತು ಅವರು ಯೇಸು ಮಸೀಹ್(ಅ) ಬದುಕಿಲ್ಲ ಬದಲಿಗೆ ಮೃತರಾಗಿದ್ದಾರೆ ಎಂದು ತಮ್ಮ ಹೃದಯದಲ್ಲಿ ದೃಢವಾಗಿ ತಿಳಿದುಕೊಂಡರು. ಹಝ್ರತ್ ಮಸೀಹ್ ಮೌಊದ್(ಅ) ಸಂಪೂರ್ಣವಾಗಿ ಸರಿಯಾಗಿದ್ದಾರೆ ಎಂದು ಅವರ ಹೃದಯಗಳು ಮನವರಿಕೆಯಾದಾಗ, ಮಸೀಹ್ ಮೌಊದ್(ಅ)ನ ಆಗಮನದ ಸಮಯವಾಗಿತ್ತು. ಈಗ ಆಗಮಿಸದಿದ್ದರೆ ಅವರು ಯಾವಾಗ ಬರುತ್ತಾರೆ? ಹೀಗೆ ಅವರು ಖಾದಿಯಾನ್‌ನಲ್ಲಿ ಅನಾರೋಗ್ಯದ ಸಮಯದಲ್ಲಿ ಬೈಅತ್ ಮಾಡಿದರು. ಅವರು ತಮ್ಮ ಗ್ರಾಮವಾದ ಭಾಂಬ್ರಿಗೆ ಹಿಂದಿರುಗಿದಾಗ ಅವರು ಅಹ್ಮದಿಯ್ಯಾತ್ ಅನ್ನು ಸ್ವೀಕರಿಸಿದ್ದಾರೆ ಎಂದು ಜನರು ತಿಳಿದಾಗ, ಜನರು ಬಂದು ಅವರ ಬಗ್ಗೆ ಅನುಕಂಪ ತೋರಿದರು. ಅವರು ಹೇಳಿದರು, ಮಿಯಾಂ ಅಬ್ದುಲ್ ಕರೀಂ ಸಾಹಿಬ್, ನೀವು ಖಾದಿಯಾನ್‌ಗೆ ಹೋಗಿ ಮಿರ್ಝಾಯಿ ಆಗುತ್ತಿದ್ದೀರಿ ಎಂದು ನಮಗೆ ತಿಳಿದಿದ್ದರೆ, ನೀವು ಕುರುಡರಾಗಿದ್ದರೂ, ನಾವು ನಿಮ್ಮನ್ನು ಖಾದಿಯಾನ್‌ಗೆ ಹೋಗಲು ಬಿಡುತ್ತಿರಲಿಲ್ಲ. ಆದ್ದರಿಂದ ಅವರ ತಂದೆ ನನ್ನ ಭೌತಿಕ ದೃಷ್ಟಿಯೊಂದಿಗೆ ನನ್ನ ಆಧ್ಯಾತ್ಮಿಕ ದೃಷ್ಟಿ ಕೂಡ ಚುರುಕುಗೊಂಡಿದೆ ಎಂದು ಉತ್ತರಿಸುತ್ತಿದ್ದರು ಮತ್ತು ಭೌತಿಕ ದೃಷ್ಟಿಗಿಂತ ಆಧ್ಯಾತ್ಮಿಕ ದೃಷ್ಟಿ ಮುಖ್ಯ ಎಂದು ಹೇಳುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ನನಗೆ ಸರಿಯಾದ ಮಾರ್ಗದಲ್ಲಿ ಮಾರ್ಗದರ್ಶನ ಮಾಡಿದ್ದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ಧನ್ಯವಾದ ಹೇಳಲು ಸಾಧ್ಯವಿಲ್ಲ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯ ಎಂದು ಒಳನೋಟದ ಕಾರಣ ನಾನು ಹೇಳಬಲ್ಲೆ. ಆದಾಗ್ಯೂ, ಗ್ರಾಮದ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಬಗ್ಗೆ ತುಂಬಾ ದ್ವೇಷವನ್ನು ಹೊಂದಿದ್ದರು, ಮೌಲವಿಗಳು ಅವರ ಮನಸ್ಸಿನಲ್ಲಿ ತುಂಬಾ ವಿಷವನ್ನು ಸೃಷ್ಟಿಸಿದರು, ಅವರು ನೀವು ಮಹದಿ ಎಂದು ಹೇಳಿದರೆ ನಾವು ನಿಮ್ಮನ್ನು ಸ್ವೀಕರಿಸುತ್ತೇವೆ ಎಂದು ಅವರು ಹೇಳುತ್ತಿದ್ದರು. ಮಹದಿಯಂತೆ, ಆದರೆ ಮಿರ್ಝಾ ಗುಲಾಮ್ ಅಹ್ಮದ್ ಒಪ್ಪುವುದಿಲ್ಲ. ಈ ಬಗ್ಗೆ ಅವರ ತಂದೆ ಹೇಳುತ್ತಿದ್ದರು, ನಾನು ಅವನನ್ನು ನಂಬಿದ್ದೇನೆ ಮತ್ತು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆ, ಆದ್ದರಿಂದ ನೀವು ಅವನನ್ನು ನಂಬಬೇಕು ಎಂಬುದು ಸತ್ಯದ ಸಂಕೇತವಾಗಿದೆ.

ಆದಾಗ್ಯೂ, ಅವರ ತಂದೆ 1926 ರಲ್ಲಿ ಭಾಂಬ್ರಿ ಸಾಹಿಬ್ ಮತ್ತು ಭಾಂಬ್ರಿ ಸಾಹಿಬ್ ಅವರ ಕಿರಿಯ ಸಹೋದರರನ್ನು ಮದ್ರಸಾ ಅಹ್ಮದಿಯಾ ಖಾದಿಯಾನ್‌ಗೆ ಸೇರಿಸಿದರು ಮತ್ತು ಅವರು ಈ ಶಾಲೆಯಲ್ಲಿ ಓದಲು ಪ್ರತಿದಿನ ಐದು ಮೈಲಿ ಪ್ರಯಾಣಿಸುತ್ತಿದ್ದರು. ಅವರ ತಂದೆ 1931 ರಲ್ಲಿ ನಿಧನರಾದರು, ಆದ್ದರಿಂದ ಅವರ ಸಹೋದರರು ಪ್ರಯತ್ನಿಸಿದರು ಮತ್ತು ಈ ಇಬ್ಬರು ಸಹೋದರರನ್ನು (ಇಬ್ರಾಹಿಂ ಭಾಂಬ್ರಿ ಮತ್ತು ಅವರ ಕಿರಿಯ ಸಹೋದರ) ಖಾದಿಯಾನ್‌ಗೆ ಅಲ್ಲಿಗೆ ಕಳುಹಿಸಬಾರದು ಎಂದು ಅವರು ತುಂಬಾ ದೂರ ಹೋಗಬೇಕಾಗಿರುವುದರಿಂದ ಅವರ ತಾಯಿಗೆ ಹೇಳಿದರು. ಪಕ್ಕದಲ್ಲೇ ಶಾಲೆ ಇದೆ, ಇಲ್ಲೇ ಅಡ್ಮಿಟ್ ಮಾಡ್ತಾರೆ ಆದರೆ ತಾಯಿ ಮಾಡೋಕೆ ಆಗುವುದಿಲ್ಲ ಎಂದು ಹೇಳಿದರು. ಅವರ ತಂದೆ ಅವರನ್ನು ಮದ್ರಸಾ ಅಹ್ಮದಿಯಾಗೆ ಸೇರಿಸಿದರು, ಆದ್ದರಿಂದ ಅವರು ಈಗ ಅಹ್ಮದೀಯ ಮದ್ರಸದಲ್ಲಿ ಓದುತ್ತಾರೆ ಮತ್ತು ಹೀಗಾಗಿ ನಾವು ಖಾದಿಯಾನ್‌ಗೆ ಹೋಗುತ್ತಿದ್ದೆವು ಎಂದು ಅವರು ಹೇಳುತ್ತಾರೆ. ನಂತರ ಅವರು ಖಾದಿಯಾನ್ ಮದ್ರಸಾದಿಂದ 7 ನೇ ತರಗತಿಯಲ್ಲಿ ಉತ್ತೀರ್ಣರಾದರು ಮತ್ತು ಜಾಮಿಯಾ ಅಹ್ಮದಿಯಾದಲ್ಲಿ ಅಧ್ಯಯನ ಮಾಡಿದರು. ಆ ಸಮಯದಲ್ಲಿ ವಿದ್ಯಾರ್ಥಿಗಳು ಏಳನೇ ತರಗತಿಯ ನಂತರ ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶಿಸುತ್ತಿದ್ದರು. ನಂತರ 1941ರಲ್ಲಿ ಖಾಸಗಿಯಾಗಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. 1939 ರಲ್ಲಿ ಮೌಲ್ವಿ ಫಾಜಿಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಂಪೂರ್ಣ ಖಸೀದಾವನ್ನು ನೆನಪಿಸಿಕೊಂಡರು. ಅನೇಕ ಕವಿತೆಗಳನ್ನು ಕಲಾಂ ಮಹಮೂದ್‌ನಿಂದ, ದುರ್ರೆ ಸಮೀನ್‌ನಿಂದ ಕಂಠ ಪಾಠಮಾಡಿದ್ದರು. ಅವರು ಬಹಳಷ್ಟು ಉಲ್ಲೇಖಗಳನ್ನು ನೆನಪಿಸಿಕೊಂಡರು ಮತ್ತು ಅವುಗಳನ್ನು ಬೇಗನೆ ರವಾನಿಸುತ್ತಿದ್ದರು. 1939 ರಲ್ಲಿ, ಪಂಜಾಬ್ ವಿಶ್ವವಿದ್ಯಾಲಯದಿಂದ ಮೌಲ್ವಿ ಫಾಜಿಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಅವರು ತಮ್ಮ ಜೀವನವನ್ನು ವಖ್ಫ್ ಮಾಡಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಸನ್ನಿಧಿಯಲ್ಲಿ ಹಾಜರಾದಾಗ ಹುಝೂರ್(ರ) ಹೇಳಿದರು: ಕಚೇರಿ ಕೆಲಸವನ್ನು ಕಲಿಯಿರಿ. ಜನವರಿ 1, 1944 ರಂದು, ಅವರು ಮದ್ರಸಾ ಅಹ್ಮದಿಯಾದಲ್ಲಿ ಧರ್ಮಶಾಸ್ತ್ರ ಮತ್ತು ಅರೇಬಿಕ್ ಶಿಕ್ಷಕರಾಗಿ ನೇಮಕಗೊಂಡರು. 1941 ರಿಂದ 1947 ರವರೆಗೆ ಜಮಾಅತ್ತಿಗೆ ಸೇವೆ ಸಲ್ಲಿಸಿದರು. 1941 ರಿಂದ 1944 ರವರೆಗೆ ಅವರು ಮೂರು ವರ್ಷಗಳ ಕಾಲ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ನಂತರ ಅವರು ನಝಾರತ್ ಬೈತ್ ಅಲ್-ಮಾಲ್‌ನಲ್ಲಿ ಕೆಲಸ ಮಾಡಿದರು ಏಕೆಂದರೆ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಗೆ ಕಚೇರಿ ಕೆಲಸವನ್ನು ಕಲಿಯಲು ಸಲಹೆ ನೀಡಿದರು. ನಂತರ, 1947 ರಲ್ಲಿ, ಅವರು ತಾಲೀಮುಲ್ ಇಸ್ಲಾಂ ಹೈಸ್ಕೂಲ್, ಖಾದಿಯಾನ್‌ನಲ್ಲಿ ಶಿಕ್ಷಕರಾಗಿ ನೇಮಕಗೊಂಡರು ಮತ್ತು ವಿಭಜನೆಯ ನಂತರ, ಅವರು ರಬ್ವಾಹ್‌ನ ತಾಲೀಮುಲ್ ಇಸ್ಲಾಂ ಹೈಸ್ಕೂಲ್‌ನಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಪಡೆದರು. ಅವರು 1974 ರವರೆಗೆ ಈ ಸೇವೆಗಳನ್ನು ಮುಂದುವರೆಸಿದರು. 1974 ರಲ್ಲಿ ಅವರು ಶಾಲೆಯಿಂದ ನಿವೃತ್ತರಾದರು ಮತ್ತು ನಂತರ 1975 ರಿಂದ 1994 ರವರೆಗೆ ಅವರು ವಕ್ಫ್ ಜದೀದ್, ನಾಝಿಮ್ ಇರ್ಷಾದ್‌ನಲ್ಲಿ ಇನ್ಸ್ಪೆಕ್ಟರ್ ಆಗಿ ಕೆಲಸ ಮಾಡಿದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರೊಂದಿಗೆ ಕೆಲಸ ಮಾಡಿದರು ಮತ್ತು ಅವರ ಸೂಚನೆಗಳ ಮೇರೆಗೆ ವಿವಿಧ ಸ್ಥಳಗಳಿಗೆ ಭೇಟಿ ನೀಡುತ್ತಿದ್ದರು ಮತ್ತು ವಿಷಯಗಳನ್ನು ನಿಭಾಯಿಸುತ್ತಿದ್ದರು. ಅವರು ಶಿಕ್ಷಕರಿಗೆ ಕಲಿಸುವ ಕರ್ತವ್ಯವನ್ನು ಸಹ ನಿರ್ವಹಿಸಿದರು. ಐವತ್ತು ವರ್ಷಗಳಿಗೂ ಹೆಚ್ಚು ಕಾಲ, ಮೊಹಲ್ಲಾ ದಾರುಲ್-ನಸ್ರ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶವೂ ಅವರಿಗೆ ಲಭಿಸಿತು. ಅವರು ಇಮಾಮ್ ಅಲ್-ಸಲಾತ್ ಆಗಿದ್ದಾಗ, ಅವರು ತರಾವೀಹ್ ಅನ್ನು ನಿರ್ವಹಿಸುತ್ತಿದ್ದರು. ಅವರು ಪವಿತ್ರ ಖುರ್‌ಆನ್ ಅನ್ನು ಚೆನ್ನಾಗಿ ಕಂಠಪಾಠ ಮಾಡಿದರು.

ಅವರ ಓರ್ವ ಪುತ್ರಿ ಹೇಳುತ್ತಾರೆ: ಸಂಬಂಧಿಕರೊಂದಿಗೆ ನಿಮ್ಮ ನಡವಳಿಕೆಯು ಅನುಕರಣೀಯವಾಗಿತ್ತು. ರಬ್ವಾಹ್‌ದ ಹೊರಗೆ ವಾಸಿಸುತ್ತಿದ್ದ ಎಲ್ಲಾ ಸಂಬಂಧಿಕರ ಮಕ್ಕಳು ನಮ್ಮ ಮನೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ನಿಮ್ಮ ದೀರ್ಘ ಮತ್ತು ಅನುಗ್ರಹದಾಯಕ ಸಕ್ರಿಯ ಜೀವನದ ರಹಸ್ಯವೆಂದರೆ ಮುಂಜಾನೆ ಬೇಗನೆ ಎದ್ದು ಅಲ್ಲಾಹನ ಧಿಕ್ರ್ ಅನ್ನು ಆಗಾಗ್ಗೆ ಮಾಡುವುದು, ನಡೆದುಕೊಂಡು ಶಾಲೆ ಮತ್ತು ಕಚೇರಿಗೆ ಸೈಕಲ್‌ನಲ್ಲಿ ಹೋಗುವುದು. ಅವರು ತುಂಬಾ ಸರಳವಾದ ಆಹಾರವನ್ನು ಸೇವಿಸುತ್ತಿದ್ದರು ಮತ್ತು ಯಾವಾಗಲೂ ತೃಪ್ತಿ ಮತ್ತು ತಾಳ್ಮೆಯಿಂದಿರುತ್ತಿದ್ದರು. ಅವರು ಖಲೀಫರನ್ನು ಬಗ್ಗೆ ಅಪಾರ ಮತ್ತು ನಿಜವಾದ ಪ್ರೀತಿಯನ್ನು ಹೊಂದಿದ್ದರು. ಅವರು ಹೇಳುತ್ತಾರೆ ನಾವೆಲ್ಲ ಮಕ್ಕಳೇ ಹೊರಗಡೆ ಇದ್ದೆವು, ನಾವು ಅವರನ್ನು ಹೊರಗೆ ಬರಲು ಕೇಳಿದಾಗ, ನಾನು ಪ್ರತಿದಿನ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಖಬರ್ ಬಳಿ ದುಆ ಮಾಡಲು ಹೋಗಬೇಕು, ಆದ್ದರಿಂದ ನಾನು ಈಗ ಹೊರಗೆ ಬರಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಬಗ್ಗೆ ವಿಶೇಷ ಪ್ರೀತಿ ಮತ್ತು ವಾತ್ಸಲ್ಯವನ್ನು ಹೊಂದಿದ್ದರು. ಯಾರಾದರೂ ನಿಮ್ಮ ಬಳಿ ಪ್ರಾರ್ಥನೆಗೆ ಬಂದಾಗ, ಅವರು ಮೊದಲು "ಕಾಲದ ಖಲೀಫರಿಗೆ ಪತ್ರ ಬರೆಯಿರಿ ಮತ್ತು ನಂತರ ನಾನು ಪ್ರಾರ್ಥಿಸುತ್ತೇನೆ" ಎಂದು ಹೇಳುತ್ತಿದ್ದರು. ನಂತರ ಅವರು ತಮ್ಮ ಕೈಗಳನ್ನು ಮೇಲಕ್ಕೆತ್ತಿ ಅವನಿಗಾಗಿ ಪ್ರಾರ್ಥಿಸುತ್ತಿದ್ದರು ಮತ್ತು ಮಲಗುವ ಮೊದಲು, ಅವರು ಹಝ್ರತ್ ಮಸೀಹ್ ಮೌಊದ್ ಅಲೈಇಸ್ಸಲಾಮ್ ಅವರ ಸಂಪೂರ್ಣ ಖಸೀದಾ ಯಾ ಐನ್ ಫೈಜ್ ಅಲ್ಲಾ ವಾಲ್ ಇರ್ಫಾನಿ.... ಸಂಪೂರ್ಣ ಖಸೀದಾದ ಎಲ್ಲಾ ಪದ್ಯಗಳನ್ನು ಪಠಿಸುತ್ತಿದ್ದರು.

ಇಬ್ರಾಹಿಂ ತಾಳೆ ಮರವನ್ನು ಏರುತ್ತಿರುವುದನ್ನು ಅವರ ತಂದೆಯ ತಂದೆ ಅಂದರೆ ಅವರ ಪುತ್ರಿಯ ಅಜ್ಜ ನೋಡಿದ ಕನಸನ್ನು ನನ್ನ ತಂದೆ ಆಗಾಗ್ಗೆ ಉಲ್ಲೇಖಿಸುತ್ತಿದ್ದರು ಅಂದರೆ ನಾನು ತಾಳೆ ಮರವನ್ನು ಏರುತ್ತೇನೆ ನನಗೆ ಕೆಳಗೆ ಬೀಳ ಬಹುದು ಎಂದು ಭಯವಾಗುತ್ತಿತ್ತು, ಆದರೆ ನಾನು ನೋಡು ನೋಡುತ್ತಲೇ ಆ ತಾಳೆ ಮರದ ಅಂಚಿಗೆ ತಲುಪುತ್ತೇನೆ. ಈ ಕನಸನ್ನು ನಿಮ್ಮ ದೀರ್ಘಾಯುಷ್ಯ ಮತ್ತು ಜ್ಞಾನ ಎಂದು ವ್ಯಾಖ್ಯಾನಿಸುತ್ತಿದ್ದರು.

ಶೇಖ್ ಮುಬಾರಕ್ ಅಹ್ಮದ್ ಸಾಹಿಬ್ ನಾಝಿರ್ ದಿವಾನ್ ಪಾಕಿಸ್ತಾನ್ ಬರೆಯುತ್ತಾರೆ: ನಾನು ಅವರ ವಿದ್ಯಾರ್ಥಿ ಯಾಗಿದ್ದೆ. ನಂತರ ಐದು ವರ್ಷಗಳ ಕಾಲ ಶಿಕ್ಷಕರಾಗಿಯೂ ಶಾಲೆಯಲ್ಲಿ ಪಾಠ ಮಾಡಿದರು. ಭಾಂಬ್ರಿ ಬೋರ್ಡಿಂಗ್ ನಲ್ಲಿ ಟ್ಯೂಟರ್ ಆಗಿ ಕೆಲಸ ಮಾಡುತ್ತಿದ್ದರು. ಅವರು ದೀರ್ಘಕಾಲ ಕೆಲಸ ಮಾಡಿದ್ದಾರೆ. ಅಹ್ಮದಿಯರು ಮತ್ತು ಅಹ್ಮದೀಯರಲ್ಲದವರು ಬೋರ್ಡಿಂಗ್ ಹುಡುಗರನ್ನು ಪ್ರೀತಿ, ವಾತ್ಸಲ್ಯ ಮತ್ತು ಸಹಾನುಭೂತಿಯಿಂದ ನಡೆಸಿಕೊಂಡರು. ಪ್ರತಿ ಹುಡುಗನ ಸ್ವಭಾವ ಮತ್ತು ಮನೋಧರ್ಮಕ್ಕೆ ಅನುಗುಣವಾಗಿ, ಅವರು ತರಬೇತಿಯ ವಿಭಿನ್ನ ವಿಧಾನವನ್ನು ಅಳವಡಿಸಿಕೊಳ್ಳುತ್ತಿದ್ದರು. ಹುಡುಗರೂ ಕೂಡ ನಿಮ್ಮನ್ನು ಬಹುಬೇಗ ತಿಳಿದುಕೊಂಡು ತಂದೆಯಂತೆಯೇ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಬೋರ್ಡಿಂಗ್‌ನಲ್ಲಿ ಹೆಚ್ಚಿನ ಸಮಯವನ್ನು

ಕಳೆಯಲಾಗುತ್ತದೆ. ನಮಾಝಿನ ಇಮಾಮತ್ ಮಾಡಿಸುವುದು. ಎಲ್ಲಾ ಹುಡುಗರನ್ನು ಪ್ರಾರ್ಥನೆಯಲ್ಲಿ ವಿಶೇಷವಾಗಿ ಮೇಲ್ವಿಚಾರಣೆ ಮಾಡಲಾಗಿತ್ತು ಮತ್ತು ತುಂಬಾ ಪ್ರೀತಿ ಮತ್ತು ಸಹಾನುಭೂತಿಯುಳ್ಳವರಾಗಿದ್ದರು, ನಾನು ಸಹ ಅವರ ವಿದ್ಯಾರ್ಥಿಯಾಗಿದ್ದೇನೆ. ಮತ್ತು ಅವರೂ ನನ್ನ ಮೇಲೆ ಕಟ್ಟುನಿಟ್ಟಾಗಿದ್ದರು, ಆದರೆ ನಾನು ಸೂಪರಿಂಟೆಂಡೆಂಟ್ ಆಗಿದ್ದಾಗ, ನಾನು ಅವರ ಕಟ್ಟುನಿಟ್ಟನ್ನು ನೆನಪಿಸಿಕೊಳ್ಳುತ್ತಿದ್ದೆ, ಆದ್ದರಿಂದ ಅವರು ನಕ್ಕರು, ಆದರೆ ಅವರೊಂದಿಗೆ ಸಹಾನುಭೂತಿ ಇತ್ತು. ಅದನ್ನು ಸುಧಾರಿಸಲು ಉದ್ದೇಶಿಸಲಾಗಿತ್ತು. ಅಧ್ಯಕ್ಷತೆಯ ಕರ್ತವ್ಯಗಳನ್ನು ಬಹಳ ಉತ್ತಮತೆಯಿಂದ ನಿರ್ವಹಿಸಿದರು, ಮಹಿಳೆಯರು ಒಂಟಿಯಾಗಿ ವಾಸಿಸುವ ಗಂಡಸರಿಲ್ಲದ ಮನೆಗಳಿಗೆಲ್ಲವೂ ನನಗೆ ತಿಳಿದಿದೆ. ಗಂಡಸರು ಮನೆಯಿಂದ ಹೊರಗೆ ಕೆಲಸಕ್ಕಾಗಿ ಹೋರಗಡೆ ಹೋಗಿದ್ದಾಗ ನಾನು ಮಾರುಕಟ್ಟೆಗೆ ಹೋಗುವ ದಾರಿಯಲ್ಲಿ ಈ ಮನೆಗಳನ್ನು ಸಂಪರ್ಕಿಸುತ್ತಿದ್ದೆ. ಆಮೇಲೆ ಬ್ಯಾಗ್ ಇತ್ತು, ಪೆನ್ನು ಇತ್ತು, ಪೇಪರ್ ಇತ್ತು ಅದರ ಮೇಲೆ ಏನು ಕೊಡಬೇಕು ಅಂತ ಬರೆಯುತ್ತಿದ್ದರು. ನಂತರ ಅವರು ತಮ್ಮ ವಸ್ತುಗಳನ್ನು ಪ್ರತಿ ಮನೆಗೆ ತಲುಪಿಸುತ್ತಿದ್ದರು. ಬರೆಯುವವರು ಇರುತ್ತಿದ್ದರೆ ಅವರ ಆ ಪತ್ರಗಳನ್ನು ಅಂಚೆ ಕಚೇರಿಗೆ ಹಾಕುತ್ತಿದ್ದರು. ಮತ್ತು ಅಲ್ಲಿಂದ ಪತ್ರಗಳು ಬಂದರೆ ಅಂಚೆ ಕಚೇರಿಯಿಂದ ತಂದು ಮನೆಗಳಿಗೆ ತಲುಪಿಸುತ್ತಿದ್ದರು. ಆಗ ಯಾರಾದರೂ ಪತ್ರವನ್ನು ಓದಲು ಕೇಳಿದರೆ, ಯಾರಾದರೂ ಅನಕ್ಷರಸ್ಥರಾಗಿದ್ದರೆ, ಅವರೂ ಅದನ್ನು ಓದುತ್ತಿದ್ದರು. ಬಹಳ ಉತ್ತಮ ಅಮೀನ್ (ನಂಬಿಗರಾಗಿದ್ದರು) ಆಗಿದ್ದರು ಮತ್ತು ಯಾರೊಂದಿಗೂ ಏನನ್ನೂ ಮಾತನಾಡುತ್ತಿರಲಿಲ್ಲ. ಮುಹಲ್ಲಾದ ಸದರ್ ಆಗಿದ್ದರಿಂದ ಹೆಂಡತಿಯರು ಕೆಲವು ವಿಚಾರಗಳನ್ನು ಅವರ ಬಳಿಗೆ ತರುತ್ತಿದ್ದರು, ಗಂಡನ ದೌರ್ಬಲ್ಯಗಳನ್ನು ಹೇಳುತ್ತಿದ್ದರು, ಆದ್ದರಿಂದ ಅವರು ಪತಿಗೆ ಅರಿವಿಲ್ಲದೆ ಸಲಹೆಗಳನ್ನು ನೀಡುತ್ತಿದ್ದರು, ಅವರ ಸಮಸ್ಯೆಯನ್ನು ಹೀಗೆ ಬಗೆಹರಿಸುತ್ತಿದ್ದರು. ನೆರೆಹೊರೆಯ ಪುರುಷರು, ಮಹಿಳೆಯರು ಮತ್ತು ಮಕ್ಕಳು ಅವರನ್ನು ತಂದೆಯಂತೆ ಕಾಣುತ್ತಿದ್ದರು.

ಹುದ್ದೆದಾರರು ಜನರೊಂದಿಗೆ ಸಂವಹನ ನಡೆಸಬೇಕಾದ ನಿಜವಾದ ಮಾರ್ಗ ಹೀಗಾಗಿದೆ ಮತ್ತು ಅವರನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸಬೇಕು. ಮತ್ತು ಅವರು ಕೆಲವು ಕವಿತೆಗಳನ್ನು ನೆನಪಿಟ್ಟುಕೊಳ್ಳಲು ಮುರಬ್ಬಿಗಳಿಗೆ ಸಲಹೆ ನೀಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ)ರ ಕವನವನ್ನು ಸಹ ಓದಲು ಹೇಳುತ್ತಿದ್ದರು. ಇದು ಸಲಹೆಗಳನ್ನು ಸಹ ಒಳಗೊಂಡಿದೆ ಮತ್ತು ನಾನು ಖಸೀದಾಗಳನ್ನು ಪ್ರತಿದಿನ ಓದುತ್ತೇನೆ ಮತ್ತು ನಂತರ ಮಲಗುತ್ತೇನೆ ಎಂದು ಅವರೇ ಹೇಳಿದರು. ಹಾಗಾಗಿ ಮುರಬ್ಬಿಗಳಿಗೂ ಇದೊಂದು ಸಲಹೆಯಾಗಿದೆ.

ಅವರ ಜೀವಿತಾವಧಿಯಲ್ಲಿ, ಅವರ ಪುತ್ರಿಯೊಬ್ಬರು ಹಳ್ಳಿಯಿಂದ ರಬ್ವಾಗೆ ಬರುವಾಗ ಹುತಾತ್ಮರಾದರು. ಅವರು ಈ ಆಘಾತವನ್ನು ಬಹಳ ತಾಳ್ಮೆ ಮತ್ತು ಶಾಂತತೆಯಿಂದ ಸಹಿಸಿಕೊಂಡರು. ನಂತರ ಇನ್ನೊಬ್ಬ ಮಗಳು ಲಂಡನ್‌ನಲ್ಲಿ ನಿಧನರಾದರು. ಆ ಸಮಯದಲ್ಲಿ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು ಮತ್ತು ಜನಾಝವನ್ನು ರಬ್ವಾಗೆ ತರಲಾಯಿತು. ಆ ಸಮಯದಲ್ಲೂ ಅವರು ಈ ಆಘಾತವನ್ನು ತುಂಬಾ ಧೈರ್ಯದಿಂದ ಸಹಿಸಿಕೊಂಡರು, ಆದರೆ ಅವರು ತಾಳ್ಮೆಯಿಂದಿರಿ ಎಂದು ಇತರರಿಗೆ ಸಲಹೆ ನೀಡಿದರು. ಆದಾಗ್ಯೂ, ಅವರು ಎಲ್ಲಾ ರೀತಿಯಿಂದಲೂ ಯಶಸ್ವಿ ಜೀವನವನ್ನು ನಡೆಸಿದರು ಮತ್ತು ಸುದೀರ್ಘ ಜೀವನವನ್ನು ನಡೆಸಿದರು ಮತ್ತು ಮುಂದಿನ ಪ್ರಪಂಚವು ಈ ಪ್ರಪಂಚಕ್ಕಿಂತ ಹೆಚ್ಚು ಸುಂದರವಾಗಿದೆ ಎಂದು ಆಗಾಗ್ಗೆ ಹೇಳುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ಅವರ ಶ್ರೇಯಾಂಕಗಳನ್ನು ಹೆಚ್ಚಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸುವ ಸಾಮರ್ಥ್ಯವನ್ನು ನೀಡಲಿ.

ಮುಂದಿನ ಜನಾಝ ಯೂಸುಫ್ ಜಾರೆ ಸಾಹಿಬ್. ಅವರು ಘಾನಾದ ನಿವಾಸಿಯಾಗಿದ್ದಾರೆ. ಅವರು ಇತ್ತೀಚೆಗೆ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅಮೀರ್ ಮಿಷನರಿ ಇನ್ ಚಾರ್ಜ್ ಘಾನಾ ಬರೆಯುತ್ತಾರೆ. ದಿವಂಗತರು ಮೂಸಿ ಆಗಿದ್ದರು. ಪ್ರಾಮಾಣಿಕ ಅಹ್ಮದಿಯರು ಸ್ನೇಹಿತರಾಗಿದ್ದರು. ಅವರು ವಿವಿಧ ಹುದ್ದೆಗಳನ್ನು ಅಲಂಕರಿಸಿದರು ಮತ್ತು ಜಮಾಅತ್ತಿನ ಬಹಳಷ್ಟು ಸೇವೆಗಳನ್ನು ನೀಡಲು ಸಮರ್ಥರಾಗಿದ್ದರು. ಅವರ ಮರಣದ ಸಮಯದಲ್ಲಿ, ಅವರು ಎರಡು ಅಹ್ಮದೀಯ ಹಿರಿಯ ಪ್ರೌಢಶಾಲೆಗಳ ಅಧ್ಯಕ್ಷ ಮಂಡಳಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಶಿಕ್ಷಣ ಇಲಾಖೆಯೊಂದಿಗೆ ಸಂಬಂಧ ಹೊಂದಿದ್ದರು. ಅವರ ನಿವೃತ್ತಿಯ ಮೊದಲು, ಅವರು ಫೋರ್ಟ್ಸನ್ ಮತ್ತು ನಂತರ ಕುಮಾಸಿಯ ಅಹ್ಮದೀಯ ಹಿರಿಯ ಶಾಲೆಗಳ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಯೂಸುಫ್ ಸಾಹಿಬ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಘಾನಾದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. 1988 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಭೇಟಿಯ ಸಮಯದಲ್ಲಿ, ಅವರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು ಮತ್ತು ಭದ್ರತಾ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದರು. ದಿವಂಗತರು ಶಿಕ್ಷಣ ಇಲಾಖೆಯೊಂದಿಗೆ ಸಂಬಂಧ ಹೊಂದಿದ್ದರು ಮತ್ತು ಅಹ್ಮದಿ ಯುವಕರ ಶಿಕ್ಷಣದಲ್ಲಿ ಯಾವಾಗಲೂ ಉತ್ಸುಕರಾಗಿದ್ದರು. ಅವರ ಮೊಮ್ಮಗರೊಬ್ಬರು ಪ್ರಸ್ತುತ ಮುರಬ್ಬಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ.

ಮುಂದಿನ ಉಲ್ಲೇಖವು ಘಾನಾದ ಅಲ್‌ಹಾಜ್ ಉಸ್ಮಾನ್ ಆದಮ್ ಸಾಹಿಬ್ ಅವರದ್ದಾಗಿದೆ. ಇತ್ತೀಚೆಗಷ್ಟೇ ಎಂಬತ್ತೊಂದನೆಯ ವಯಸ್ಸಿನಲ್ಲಿ ಅವರೂ ನಿಧನಗೊಂಡರು. ಇನ್ನಾ ಲಿಲ್ಲಾಃಇ ವ ಇನ್ನಾ ಇಲೈಹಿ ರಾಜಿಊನ್. ಅಮೀರ್ ಮಿಷನರಿ ಇನ್‌ಚಾರ್ಜ್ ಅವರ ಬಗ್ಗೆ ಬರೆಯುತ್ತಾರೆ. ಅವರು ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು. ಅವರು ಅತ್ಯಂತ ಪ್ರಾಮಾಣಿಕ ಅಹ್ಮದಿಯಾಗಿದ್ದರು. ಅವರು ನಮಾಝ್‌ಗಳನ್ನು ನಿಯಮಿತವಾಗಿ ನಿರ್ವಹಿಸುವವರಾಗಿದ್ದರು, ಚಂದಗಳನ್ನು ನೀಡುವುದರಲ್ಲಿ ನಿಯಮಿತವಾಗಿರುತ್ತಿದ್ದರು, ಸಮುದಾಯದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು, ಖಿಲಾಫತ್ಗೆ ನಿಜವಾದ ನಿಷ್ಠರಾಗಿದ್ದರು ಮತ್ತು ಅವರು ತಮ್ಮ ಮಕ್ಕಳಲ್ಲಿ ಈ ಮನೋಭಾವವನ್ನು ಬೆಳೆಸಲು ಪ್ರಯತ್ನಿಸುತ್ತಿದ್ದರು. ಅವರು ತಮ್ಮ ಮಕ್ಕಳ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣಕ್ಕೆ ಹೆಚ್ಚಿನ ಗಮನ ನೀಡಿದರು. ಪವಿತ್ರ ಖುರ್‌ಆನ್ ಅನ್ನು ಫ್ಯಾಂಟಿ ಭಾಷೆಗೆ ಅನುವಾದಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ದಿವಂಗತರು ತುಂಬಾ ತಾಳ್ಮೆ ಮತ್ತು ಪ್ರೀತಿಯ ವ್ಯಕ್ತಿಯಾಗಿದ್ದರು ಎಂದು ಅವರ ಪತ್ನಿ ಹೇಳುತ್ತಾರೆ. 2012ರಲ್ಲಿ ಅಲ್ಲಾಹನ ಅನುಗ್ರಹಸಿಂದ ಹಜ್ ಯಾತ್ರೆ ಕೈಗೊಳ್ಳುವ ಸೌಭಾಗ್ಯ ಲಭಿಸಿತು. ಅವರು ಜಮಾಅತ್ತಿನ ಅನೇಕ ಸದಸ್ಯರಿಗೆ ಪವಿತ್ರ ಖುರ್‌ಆನ್ ಕಲಿಸಿದರು. ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ. ಅಲ್ಲಾಹನು ಅವರ ಮಕ್ಕಳಿಗೂ ಅವರ ಹೆಜ್ಜೆ ಗುರುತುಗಳಲ್ಲಿ ಚಲಿಸಲು ಸೌಭಾಗ್ಯ ನೀಡಲಿ..

...*...*...*...

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅನಂತರ ಈ ಕೆಳಗೆ ನಮೂದಿಸಿದ ಅತಿಥಿಗಳು ಪರಿಚಯಾತ್ಮಕ ಭಾಷಣ ಮಾಡಿದರು. ಮಾನ್ಯ ಹಫೀಝ್ ಬಿನ್ ಸಾಲಿಹ್ ಸಾಹಿಬ್, ರೀಜಿನಲ್ ಮಿನಿಸ್ಟರ್ ಘ.ಂ ಘಾನ, ಮಾನ್ಯ ಸುನಾಶ್‌ತೋ ಸಾಹಿಬ್ ನ್ಯಾಷಿನಲ್ ಸೆಕ್ರಟರಿ ವಿದೇಶಾಂಗ ಖಾತೆ ಇಂಡೋನೇಷಿಯಾ, ಮಾನ್ಯ ಮೌಲಾನ ಸಾಲಿಹ್ ಅಹ್ಮದ್ ಸಾಹಿಬ್ ಸಂಘಟನಾ ಮುರಬ್ಬಿ ಭಾಂಗ್ಲಾದೇಶ.

ಈ ಅಧಿವೇಶನದ ಮೂರನೇ ಭಾಷಣ ಮಾನ್ಯ ಕೆ. ತಾರಿಖ್ ಅಹ್ಮದ್ ಸಾಹಿಬ್ ಎಡಿಷನಲ್ ನಾಝಿರ್ ಇಸ್ಲಾಹ್ ವ ಇರ್ಷಾದ್ ನೂರುಲ್ ಇಸ್ಲಾಂ ಖಾದಿಯಾನ್ ಮಾಡಿದರು. "ಜಾಗತಿಕ ಬಿಕ್ಕಟ್ಟು ಕುರಿತು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರು ಮಾಡಿದ ಮುನ್ನೆಚ್ಚರಿಕೆ ಮತ್ತು ಉಪದೇಶಗಳು ಹಾಗೂ ಅಹ್ಮದಿಯಾ ಜಮಾಅತಿನ ಹೊಣೆಗಾರಿಕೆಗಳು" ಎಂಬ ಶೀರ್ಷಿಕೆಯ ಮೇಲೆ ಭಾಷಣ ಮಾಡಿದರು.

ಎರಡನೇ ದಿನ ಎರಡನೆ ಅಧಿವೇಶನ

ಎರಡನೇ ದಿನದ ಎರಡನೆ ಅಧಿವೇಶನದ ಅಧ್ಯಕ್ಷತೆ ಮು. ಸಯ್ಯಿದ್ ತನ್ವೀರ್ ಅಹ್ಮದ್ ಸಾಹಿಬ್ ಸದರ್ ಮಜ್ಲಿಸ್ ವಖ್ಫೆ ಜದೀದ್ ಖಾದಿಯಾನ್ ಮಾಡಿದರು. ಮು. ತಾರಿಖ್ ಅಹ್ಮದ್ ಲೋನ್ ಸಾಹಿಬ್ ಆಫ್ ಕಾಶ್ಮೀರ್ ಸೂರಃ ಅಲ್-ಹುಜುರಾತಿನ ವಚನ 12 ರಿಂದ 14 ರ ಪಠಣ ಮಾಡಿದರು. ಅದರ ಅನುವಾದ ಮು. ನುರುದ್ದೀನ್ ನಾಸಿರ್ ಸಾಹಿಬ್ ಸದರ್ ಉಮಾಮಿ ಲೋಕಲ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ನಿರ್ವಹಿಸಿದರು. ಮು. ಮುರ್ಷಿದ್ ಅಹ್ಮದ್ ಡಾರ್ ಸಾಹಿಬ್ ಮತ್ತು ಅವರ ಸಂಗಡಿಗರು ಸಾಮೂಹಿಕವಾಗಿ ಕವನ ಪ್ರಸ್ತುತಪಡಿಸಿದರು.

ಮು. ತನ್ವೀರ್ ಅಹ್ಮದ್ ಸಾಹಿಬ್ ಖಾದಿಮ್ ನಾಯಿಬ್ ನಾಝಿರ್ ದಾವತ್ ಇಲಲ್ಲಾಹ್ ಉತ್ತರ ಭಾರತ ಅವರು "ಜನ ಸೇವೆ" ಶೀರ್ಷಿಕೆ ಅಡಿಯಲ್ಲಿ ಪಂಜಾಬಿ ಭಾಷೆಯಲ್ಲಿ ಭಾಷಣ ಮಾಡಿದರು.

ಎರಡನೆ ದಿನದ ಎರಡನೇ ಅಧಿವೇಶನವು ಸರ್ವಧರ್ಮ ಸಮ್ಮೇಳನದ ರೂಪದಲ್ಲಿ ಆಚರಿಸಲಾಗುತ್ತದೆ. ಅದಕ್ಕಾಗಿ ವಿವಿಧ ಧರ್ಮಗಳ ಮುಖಂಡರನ್ನು ಮತ್ತು ಸಾಧು ಸಂತರನ್ನು, ಗುರುಗಳನ್ನು ಮತ್ತು ಪಂಡಿತರನ್ನು ಹಾಗೂ ಚರ್ಚ್‌ನ ಫಾದರುಗಳನ್ನು ಆಹ್ವಾನಿಸಲಾಗುತ್ತದೆ. ಅವರುಗಳಲ್ಲದೇ ರಾಜಕೀಯ ಮುಖಂಡರು ಸಹ ಆಗಮಿಸುತ್ತಾರೆ. ಎಲ್ಲರೂ ಜಲ್ಸ ಮತ್ತು ಅಹ್ಮದಿಯಾ ಸಂಘಟನೆಯ ಬೋಧನೆಗಳ ಕುರಿತು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಮು. ತನ್ವೀರ್ ಅಹ್ಮದ್ ಖಾದಿಮ್

ಸಹಿಬ್ ನಾಯಿಬ್ ನಾಝಿರ್ ದಾವತ್ ಇಲಲ್ಲಾಹ್, ಸರತಿಯಂತೆ ಅತಿಥಿಗಳ ಪರಿಚಯ ಮಾಡಿಕೊಟ್ಟರು ಮತ್ತು ಅವರಿಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು. ಮನವಿ ಮಾಡಿದರು. ಆ ಎಲ್ಲಾ ಅತಿಥಿಗಳ ಹೆಸರುಗಳು ಇಂತಿವೆ:

ಅವಿನಾಶ್ ಖನ್ನ ಸಾಹಿಬ್.
(ಮಾಜಿ ಲೋಕಸಭಾ ಸದಸ್ಯರು ಮತ್ತು ಬಿಜೆಪಿಯ ಹಿರಿಯ ಮುಖಂಡರು)
ಕುಲ್‌ದೀಪ್ ಸಿಂಗ್ ಧಾಲಿವಾಲ್ ಸಾಹಿಬ್,
(NRI ಸಚಿವರು, ಪಂಜಾಬ್ ಸರಕಾರ)
ಜಗ್ರೂಪ್ ಸಿಂಗ್ ಸೇಖ್ವಾನ್ ಸಾಹಿಬ್
(ವಿಭಾಗೀಯ ಇನ್‌ಚಾರ್ಜ್ ಆಮ್ ಆದ್ಮಿ ಪಾರ್ಟಿ, ಜಿಲ್ಲಾ ಗುರುದಾಸ್‌ಪೂರ್)
ಮು. ನೋಮಂತ್ ರಾಮೆ ಸಾಹಿಬ್
(ಫಾದರ್ ಬಿಷಪ್, ಉತ್ತರ ಭಾರತ ಅಮೃತ್ಸರ್)
ಫತಹ ಸಿಂಗ್ ಬಾಜ್ವಾ
(MLA ಕ್ಷೇತ್ರ ಖಾದಿಯಾನ್)
ರಮನ್ ಬಿಹಲ್ ಸಾಹಿಬ್ ಪುತ್ರ ಖುಫ್‌ಹಾಲ್ ಬಹಲ್ ಸಾಹಿಬ್,
(ಚೇರ್‌ಮನ್ ಪಂಜಾಬ್ ಹೆಲ್ತ್ ಸಿಸ್ಟಮ್ ಕಾರ್ಪೋರೇಷನ್)
ಸಂತ ಬಾಬಾ ಸುಖ್‌ದೇವ್ ಸಿಂಗ್ ಜೀ ಬೇದಿ
(ಗುರುನಾನಕ್ ದೇವಜಿಯ 16ನೇ ವಂಶ)
ಮು. ಅಮನ್ ಶೇರ್ ಸಿಂಗ್ ಸಾಹಿಬ್
( AAP , MLA ಕ್ಷೇತ್ರ ಬಟಾಲ)
ಮು. ಡಾ॥ ರಾಜ್‌ಕುಮಾರ್ ಸಾಹಿಬ್
MLA ಕ್ಷೇತ್ರ ಕ್ಷಬ್ಬೆನಾಲ್ ಹೋಶಿಮಾರ್‌ಪೂರ್ (ಡೆಪ್ಯೂಟಿ ಲೀಡರ್ ಆಫ್ ಅಪೋಝಿಷನ್ ಪಂಜಾಬ್ ಅಸೆಂಬ್ಲಿ)
ಮು. ಪ್ರತಾಪ್ ಸಿಂಗ್ ಬಾಜ್ವಾ ಸಾಹಿಬ್
MLA ಖಾದಿಯಾನ್ (ಪಂಜಾಬ್ ಅಸೆಂಬ್ಲಿಯ ವಿರೋಧ ಪಕ್ಷದ ನಾಯಕರು)
ಮು. ಅನುರಾಗ್ ಸೋವುಜೀ ಆಫ್ ಹೋಶಿಯಾರ್‌ಪೂರ್,
ಪದ್ಮಶ್ರೀ. ಮು. ವಿಜಯಕುಮಾರ್ ಚೌಪದ್ ಸಾಹಿಬ್
ಸಿ.ಎಮ್.ಡಿ ಹಿಂದ್ ಸಮಾಚಾರ್ ಆಫ್ ಜಾಲಂಧರ್.

ಮಾನ್ಯ ಸಭಾಧ್ಯಕ್ಷರಿಂದ ಎಲ್ಲಾ ಜಲ್ಸದಲ್ಲಿ ಉಪಸ್ಥಿತರಿದ್ದವರಿಗೆ ಧನ್ಯವಾದಗಳನ್ನು ಅರ್ಪಿಸಿದರು ಮತ್ತು ಅಹ್ಮದಿಯಾ ಜಮಾಅತ್ ವತಿಯಿಂದ ಶಾಲ್ ಅನ್ನು ಉಡುಗೋರೆಯಾಗಿ ನೀಡಲಾಯಿತು. (ಶೇಷ)

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಸ್ಥಾಪಕನನ್ನು "ಪ್ರಾರ್ಥನಾ ಸಮರ" ಎಂದರೆ ಮುಬಾಹಲಕ್ಕೆ ಪಂಥ್ವಾನ ನಿಡಿದರು. ನ್ಯೂಯಾರ್ಕ್ ಟ್ವಾಮ್ ಮತ್ತು ಆ ಸಮಯದ ಇತರ ಅಮೇರಿಕಾ ವಾರ್ತೆ ಪತ್ರಿಕೆಗಳು ಈ ಪಂಥ್ವಾನವನ್ನು ಉಭಯ ಮಸೀಹರ ಮಧ್ಯದ ಯುದ್ಧ ಎಂದು ವಿವರಿಸಿದ್ದರು. ಅದು ಯಾರು ಸತ್ಯ ಪ್ರವಾದಿ ಮತ್ತು ಯರು ಮಿಥ್ಯರು ಎಂದು ತಿಳಿಯಲು ಸಾರಿದ ಯುದ್ಧವಾಗಿತ್ತು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಬರಹ ಮೂಲಕ ಒತ್ತಿ ಹೇಳಿದರು. ಸುಳ್ಳುಗಾರನು ಸತ್ಯವಂತನ ಜೀವನದಲ್ಲಿಯೇ ನಾಶಗೊಳ್ಳುವನು" ಎಂದು.

ಡೂಯಿ ಅವರ(ಅ) ಪಂಥಾಹ್ವಾನವನ್ನು ಸ್ವೀಕರಿಸಲು ನಿರಾಕರಿಸಿದ್ದರು. ಮತ್ತು ಅವರ ವಾದಗಳಾದ ಈಸಾ(ಅ) ಒಬ್ಬ ಮನುಷ್ಯರು ಮಾತ್ರರಾಗಿದ್ದರು. ಶಿಲುಬೆಯಿಂದ ರಕ್ಷಿಸಲ್ಪಟ್ಟರು ಮತ್ತು ಅವರು ಬಾಕಿ ಉಳಿದ ಜೀವನ ಕಾಶ್ಮೀರದಲ್ಲಿ ಕಳೆದರು, ಎಂಬ ವಾದಕ್ಕೆ ಉತ್ತರ ಹೇಳಿದನು. ನೀವು ನನ್ನನ್ನು ಇಂತಹ ಸೊಳ್ಳೆಗಳಿಗೆ ಮತ್ತು ನೊಣಗಳಿಗೆ ಉತ್ತರಿಸುವನು ಎಂದು ಭಾವಿಸಿದ್ದೀರ?

ಮುಂದಿನ ವರ್ಷಗಳಲ್ಲಿ ಡೂಯಿಯ ಹೆಸರು ಮಾನ ಕಳೆಯುತ್ತ ಬಂತು. 1905 ರಲ್ಲಿ ಡೂಯಿಯ ಒಬ್ಬ ಲೆಫ್ಟಿನೆಂಟ್ ವಿಲ್ಸರ್ ಮೌಲ್ವಿ ಈ ಚರ್ಚ್‌ನ ನೇತೃತ್ವ ವಹಿಸಿದ್ದರು. ಡೂಯಿಯ ದುಂದುವೆಚ್ಚ ಮತ್ತು ಹಣಕಾಸಿನ ದುರುಪಯೋಗದ ಆರೋಪ ಬಂದ ಮೇಲೆ ಅವರ ಆರೋಗ್ಯ ಹದಗೆಟ್ಟಿತು. ಅವರ ಮರಣ 1907 ರಲ್ಲಿ ಪಾಶ್ವವಾಯುವಿನಿಮದಾಗಿ ಆಯಿತು. ಇನ್ನೊಂದೆಡೆ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಡೂಯಿ ತೀರಿ ಹೋದ ಒಂದು ವರ್ಷದ ನಂತರ 73 ನೇ ವಯಸ್ಸಿನಲ್ಲಿ ತೀರಿ ಹೋದರು. ಅವರ (ಅ) ಅನುಯಾಯಿಗಳು ಡೂಯಿಯ ಅವಮಾನ ಮತ್ತು ಮರಣವನ್ನು ತನ್ನ ಸ್ಥಾಪಕರ ಮತ್ತು ವಿಶ್ವಾಸದ ಒಂದು ದೊಡ್ಡ ವಿಜಯ ಎಂದು ಭಾವಿಸುತ್ತಾರೆ.

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಅಮೇರಿಕಾ ಪ್ರತಿನಿಧಿ ಅಮ್ಜದ್ ಮೆಹಮ್ಮೂದ್ ಖಾನ್ ಸಾಹಿಬ್ ಹೇಳಿದರು. ಲೋಕಾದ್ಯಂತ ಅಹ್ಮದಿಯರಿಗೆ ಈ ಮುಬಾಹಲ ಅಹ್ಮದಿಯಾ ಜಮಾಅತಿ ಸ್ಥಾಪಕರ ವಾದಗಳ ಸತ್ಯವನ್ನು ದೃಢೀಕರಿಸಲಾಗಿದೆ. ಇದೊಂದು ಎಂತಹ ಘಟನೆಯಾಗಿದೆ ಎಂದರೆ ಅಹ್ಮದಿ ಮಕ್ಕಳು ಪ್ರಪಂಚದಾದ್ಯಂತ ಇದನ್ನು ತನ್ನ ಮನೆಗಳಲ್ಲಿ ಮಸೀದಿಗಳಲ್ಲಿ ಆಲಿಸುತ್ತಲೇ ದೊಡ್ಡವರಾಗಿರುತ್ತಾನೆ.

ಖಾನ್ ಸಾಹಿಬರು ಹೇಳಿದರು. ನೀವು ಬೇಕಾದರೆ ಮ್ಯಾಮಿ, ಮೆನ್, ಸೌಥ್ ಡಕೋಟಾ ಅಥವಾ ಸೆಟ್ಲ್ ಎಲ್ಲಿಯೂ ಯಾವ ಅಹ್ಮದಿನೊಡನೆಯೂ ಕೇಳಿ ನೋಡಿ ಈ ಘಟನೆ ತಿಳಿದಿರುತ್ತದೆ ಮತ್ತು ಇದೊಂದು ಎಂತಹ ಮಹಾನ್ ವಿಜಯವಾಗಿತ್ತು ಎಂದು ಉದ್ಗರಿಸುತ್ತಾರೆ.

ಅವರು ಮತ್ತು ಹೇಳಿದರು. ಇದರ ಅರ್ಥ ನಾವು ಡೂಯಿಯ ನಿಧನದಿಂದ ಸಂತುಷ್ಟಗೊಂಡಿವೆ ಎಂದಲ್ಲ. ಈ ವಾದ ಇಸ್ಲಾಮಿನ ಮೇಲೆ ಹೊರಿಸಲಾದ ಸುಳ್ಳು ಆರೋಪಗಳ ಮೇಲಿನ ವಿಜಯವಾಗಿದೆ ಮತ್ತು ಈ ಘಟನೆ ದ್ವೇಷದ ಮೇಲೆ ಪ್ರಾರ್ಥನೆಯ ವಿಜಯವಾಗಿದೆ.

ಖಾನ್ ಸಾಹೇಬರು ಹೇಳಿದರು. ಅಹ್ಮದಿಯಾ ಜಾಗತಿಕ ಇಂದಿನ ಸರ್ವೋಚ್ಚ ನೇತಾರರು ಮತ್ತು ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್ ಒಸ ಮಸೀದಿಯ ಕಟ್ಟಡವನ್ನು ಉದ್ಘಾಟಿಸಲು ಜುಟಿಟಿ ನಗರಕ್ಕೆ ಆಗಮಿಸಿರುತ್ತಾರೆ.

Zion ನ ಅಹ್ಮದಿಯಾ ಸಮುದಾಯಕ್ಕೆ ಮಹಿಳೆಯರ ಬೆಂಬಲವು ಇದೆ. ಅವರು ಇಲ್ಲಿ ನೇತೃತ್ವ ಗುಣವನ್ನು ಪ್ರದರ್ಶಿಸಿದ್ದಾರೆ. ಅದಾಗ್ಯ ಆಫ್ರಿಕ ಅಮೇರಿಕನ್ನರ ಒಂದು ದೊಡ್ಡ ಸಂಖ್ಯೆ ಈ ಜಮಾಅತಿನಲ್ಲಿ ಸುಮರು ಅರ್ಧ ಪಾಲು ಅಫ್ರಿಕಾ ಅಮೇರಿಕನ್ನದ್ದಾಗಿದೆ.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಹಿಳೆಯರ ಅಧ್ಯಕ್ಷೆ ಝಿಯಾ ತೌಹಿಕ್ ಬಶರ್ ಸಾಹಿಬ ಹೇಳಿದರು. ಅಹ್ಮದಿ ಮಹಿಳೆಯರು ಹೊಸ ಮಸೀದಿಕ್ಕೋಸ್ಕರ ಒಟ್ಟು ಹಣಕಾಸಿನ ಸುಮಾರು ಅರ್ಧ ಪಾಲನ್ನು ನೀಡಿದ್ದಾರೆ. ಬಶರ್ ಅವರು ಆಫ್ರಿಕಾ ಅಮೇರಿಕನ್ನವರಾಗಿದ್ದಾರೆ. ಅವರು ಸುಮಾರು ನಲವತ್ತು ವರ್ಷಗಳ ಹಿಂದೆ ಅಹ್ಮದಿಯತ್ ಸ್ವೀಕರಿಸಿದರು. ಅವರು ಹೇಳಿದರು. ಸಂಸ್ಕೃತಿ ಮತ್ತು ಭಾಷೆಗಳ ಮೇಲೆ ಹಿಡಿತ ಸಾಧಿಸುವುದು ಕಷ್ಟವೇನಿಲ್ಲ. ಏಕೆಂದರೆ ಅವರ ವಿಶ್ವಾಸವು ಎಲ್ಲಾ ಸಂಸ್ಕೃತಿಗಳನ್ನು ಅಹ್ಮದಿಯರಿಗೆ ಪರಸ್ಪರ ಪ್ರೀತಿಯಲ್ಲಿ ಪೋಣಿಸಿದೆ. ಬಶರ್ ಹೇಳಿದರು. ನಾನು ಯೌವನ ಕಾಲದಲ್ಲಿ ಚಹಾ ಕುಡಿದಿರಲಿಲ್ಲ. ಮಸಾಲಯುಕ್ತ ಆಹಾರವು ಸೇವಿಸಿರಲಿಲ್ಲ. ಆದರೆ ಅದು ಈಗ ಇಷ್ಟವಾಗಿದೆ. ಒಬ್ಬರು ಇನ್ನೊಬ್ಬರೊಂದಿಗೆ ಮಾತನಾಡುವಾಗ ಇವೆಲ್ಲ ಮರೆತು ಬಿಡುತ್ತೇವೆ. ಏಕೆಂದರೆ ನೀವು ಹೃದಯಪೂರ್ವಕವಾಗಿ ಹೊಂದಿಕೊಂಡಿರುತ್ತೀರಿ.

ಅವರು ಹೇಳಿದರು. ಮುಬಾಹಲ ಮತ್ತು ಡೂಯಿಯ ಮರಣವು ಅಹ್ಮದಿಯ ಮುಸಲ್ಮಾನರಿಗೆ Zion ನಗರದಲ್ಲಿ ಸೇವೆ ಮಾಡಲು ಮಾರ್ಗವನ್ನು ತೆರೆದಿದೆ. ನಾವು ಬಾಗಿಲು ತಟ್ಟುತ್ತೇವೆ ಮತ್ತು ಜನರಿಗೆ ತಿಳಿಸುತ್ತೇವೆ. ಅವರಿಗೆ ನಮ್ಮ ಮುಸಲ್ಮಾನರಿಂದ ಹೆದರುವ ಯಾವ ಅವಶ್ಯಕತೆಯೂ ಇಲ್ಲ. ಬಶರ್ ಹೇಳಿದರು. ನಾವು ಈ ಕೆಲಸ ನಮ್ಮ ಮಕ್ಕಳಿಗಾಗಿ ಅವರ ತಪ್ಪು ಕಲ್ಪನೆಯನ್ನು ಹೋಗಲಾಡಿಸಲು ಕಾರ್ಯ ಮಾಡುವುದು ಅನಿವಾರ್ಯವಾಗಿದೆ.

ಅಹ್ಮದಿ ತಮ್ಮ ಗೋಪುರ ನಿರ್ಮಾಣದಲ್ಲಿ ಮುಂದೆ ಬರುತ್ತಿದ್ದಾರೆ. ಅದು, ಬರುವ ವರ್ಷ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಗೋಪುರವು ಇಸ್ಲಾಮಿನ ಜಾಗತಿಕ ಸಂಕೇತವಾಗಿದೆ. ಗೋಪುರದ ನಿರ್ಮಾಣ ಡ್ಯೂಯಿಯ Utopia vision ಗೆ ಅಪ್ಪಟ ತದ್ವಿರುದ್ಧವಾಗಿರುವುದು. ಶೀಘ್ರದಲ್ಲೇ ಅದು ನೆಲದಿಂದ 70 ಫೀಟ್ ಮಸೀದಿಯ ಗೋಪುರ ಡೂಯಿಯ ನಗರಕ್ಕಿಂತಲೂ ಎಲ್ಲದಕ್ಕಿಂತ ಎತ್ತರವಾಗಿರುವುದು.

ಅಮೇರಿಕನ್ ಸುದ್ದಿ ಮಾಧ್ಯಮ (Associated press) ನ Article ಅಮೇರಿಕಾದ 200 ಪತ್ರಿಕೆಗಳ ಪ್ರಿಂಟ್ ಮಿಡಿಯಾದಲ್ಲಿ ಮತ್ತು 176 ಆನ್‌ಲೈನ್ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಅದಲ್ಲದೇ ಕೆನಡಾದಲ್ಲಿ ಹುಝೂರೆ ಅನ್ವರ್(ಅತಬಾ) Zion ಪ್ರವಾಸ ಮತ್ತು ಮಸ್ಜಿದ್ ಫತಹ ಅಝೀಮ್ ಉದ್ಘಾಟನೆಯನ್ನು ಅತ್ಯಂತ ವಿಶಾಲ ನೆಲೆಯಲ್ಲಿ ಪ್ರಚಾರ ಮಾಡಿದೆ.

ಕೆನಡಾದಲ್ಲಿ ಅಲ್ಲಾಹನ ಅನುಗ್ರಹದಿಂದ 9 ಪ್ರಸಿದ್ಧ ಪತ್ರಿಕೆಗಳಲ್ಲಿ ಮತ್ತು 6 ಆಲ್‌ಲೈನ್ Publication ಮತ್ತು ಒಂದು ರೇಡಿಯೋ ಸ್ಟೇಷನ್ ಮೂಲಕ Zion ಪ್ರವಾಸವನ್ನು ಬಿತ್ತರಿಸಿದೆ. ಕೆನಡಾದಲ್ಲಿ 8 ಲಕ್ಷ 57 ಸಾವಿರ ಜನರಿಗೆ ಈ ಸಂದೇಶ ತಲುಪಿದೆ.

ಅಮೇರಿಕಾ, ಕೆನಡಾ ಅಲ್ಲದೇ ಯು.ಕೆ. ಯುನಾನ್, ಸಿರಾಲಿಯೋನ್, ತೌಯಿವಾನ್, ಇಂಡಿಯಾ, ಹಾಂಗ್‌ಕಾಂಗ್, ಪೇರು, ಫಿಲ್‌ಫ್ಯಾನ್, ದಕ್ಷಿಣ ಆಫ್ರಿಕಾ, ತಂಝಾನಿಯಾ ಮತ್ತು ವೆನ್ನಾಮ್‌ನ ಆನ್‌ಲೈನ್ ಪತ್ರಿಕೆಗಳು ಸಹ ಸುದ್ದಿ ಬಿತ್ತರಿಸಿವೆ.

ಅಮೇರಿಕನ್ ಸುದ್ದಿ ಮಾಧ್ಯಮ (Associated press) ಆ ಮೂಲಕ Zion ಮಸೀದಿಯ ಉದ್ಘಾಟನೆಯ ಸುದ್ದಿ ಪ್ರಪಂಚದಾದ್ಯಂತ ತಲುಪಿದೆ. ಅದರ ಪರಿಚಯ ಈ ಕೆಳಗೆ ನೀಡಲಾಗಿದೆ.

ಇದು ಲೋಕದ ಬಹು ದೊಡ್ಡ ಸುದ್ದಿ ಮಾಧ್ಯಮವಾಗಿದೆ. ಇದು ಇಲ್ಲಿಯವರೆಗಿನ ಪತ್ರಕರ್ತೆಯಲ್ಲಿ ಲೋಕದ ಸರ್ವಶ್ರೇಷ್ಠ ಪ್ರಶಸ್ತಿ Pulitzer prize 56 ಸಲ ಗೆದ್ದುಕೊಂಡಿದೆ. ಈ ಸುದ್ದಿ ಮಾಧ್ಯಮ ಹಿಂದಿನ 17172 ವರ್ಷಗಳಿಂದ ಸ್ಥಾಪಿತಗೊಂಡಿದೆ. ಮತ್ತು ಲೋಕದ ನೂರಕ್ಕಿಂತ ಹೆಚ್ಚು ದೇಶಗಳಲ್ಲಿ 203 ಕ್ಷೇತ್ರಗಳಲ್ಲಿ ಅದರ 378 ಸುದ್ದಿ ಕೊಠಡಿಗಳಿವೆ. ಇದು ವಾರ್ಷಿಕವಾಗಿ 510 ಮಿಲಿಯನ್ ಡಾಲರ್ಸ್ Revenue ಕ್ರೂಢೀಕರಿಸುತ್ತದೆ. Religion News Service ನ ಪತ್ರಕರ್ತರು ಶನಿವಾರ ಒಂದನೇ ಅಕ್ಟೋಬರ್‌ನ ಸಂಜೆ ಹುಝೂರರ ಸಂದರ್ಶನ ಪಡೆದುಕೊಂಡಿದ್ದರು. ಅನಂತರ ಅವರು ಈ ಸಂದರ್ಶನವನ್ನು ಈ ಕೆಳಗೆ ಕಾಣಿಸಿದ ಶೀರ್ಷಿಕೆಯೊಂದಿಗೆ ಪ್ರಕಟಪಡಿಸಿದೆ.

Ahmadi Muslims innaugurate new mosque on site of historic, prayer Duel"

ಎಂದರೆ ಅಹ್ಮದಿ ಮುಸಲ್ಮಾನರು ಐತಿಹಾಸಿಕ ಮುಬಾಹಲ ಸ್ಥಳದಲ್ಲಿ ಮಸೀದಿಯ ಉದ್ಘಾಟನೆ ಮಾಡಿದ್ದಾರೆ.

Religion News Services ನ ಓದುಗರ ಸಂಖ್ಯೆ ಮಾಸಿಕ 22 ಲಕ್ಷವಾಗಿದೆ.

ಪತ್ರಿಕೆ ಬರೆಯುತ್ತದೆ. ಇಬ್ಬರು ಮನುಷ್ಯರು ಅವರು ಅಲ್ಲಾಹನ ಕಡೆಯಿಂದ ಪ್ರವಾದಿಯಾಗುವ ವಾದ ಮಂಡಿಸುತ್ತಿದ್ದರು. ಅಲ್ಲಾಹನಿಂದ ತನ್ನ ವಾದದ ಸತ್ಯತೆ ಜಾಹೀರಪಡಿಸಲು ಪ್ರಾರ್ಥಿಸಿದರು. ಒಬ್ಬರು ಅಲೆಕ್ಸಾಂಡರ್ ಡೂಯಿ ಕ್ರಿಸ್ತ ಪಾದರಿಯಾಗಿದ್ದರು. ಅವರು (illinois) ನಲ್ಲಿ Zion ನಗರದ ಬುನಾದಿಯನ್ನು ಹಾಕಿದರು. ಅದರ ವಿರುದ್ಧ ಪಂಥ್ವಾನ ನೀಡುವವರು ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಅಹ್ಮದಿಯಾ ಸಂಘಟನೆಯ ಸ್ಥಾಪಕರಾಗಿದ್ದರು. ಪಂಥಾಹ್ವಾನವೇನಿತ್ತೆಂದರೆ ಯಾರ ಮರಣ ಮೊದಲಾಗುವುದು ಅವರು ಸೋತಹಾಗೆ. ಆದ್ದರಿಂದ ಡೂಯಿ ಹಝ್ರತ್ ಮಸೀಹ್ ಮೌಊದ್(ಅ) ರವರ ಜೀವಿತದಲ್ಲೇ ಯಾವ ಸ್ಥಿತಿಯಲ್ಲಿ ನಿಧನಗೊಂಡರೆಂದರೆ ಅವನ ಕುಟುಂಬವು ಅವನಿಗೆ ಬಿಟ್ಟುಬಿಟ್ಟಿತ್ತು. ಹೀಗೆ ಈ ಪಂಥ್ವಾನದಲ್ಲಿ ಅವನಿಗೆ ಸೋಲುಂಟಾಯಿತು.

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದಿ ಅಹ್ಮದಿಯಾ ಜಮಾಅತಿನ ಖಲೀಫರು ಹೇಳಿದರು. ಈ ಮಸೀದಿಯ ಹೆಸರಿನಲ್ಲಿ ಫತಹ್ ಪದವೇನಿದೆ. ಅದು ಯಾರು ದೇವನ ಯಥಾರ್ಥ ಮತ್ತು ನಿಜವಾದ ಮನುಷ್ಯರಾಗಿದ್ದಾರೆ ಎಂಬುದು ಸೂಚಿಸುತ್ತದೆ ಮತ್ತು ನಾವು ಎಲ್ಲಾ ಧರ್ಮಗಳನ್ನು ಗೌರವಿಸಬೇಕು ಎಂಬ ಪಾಠ ನೀಡುತ್ತದೆ.

ಲಜ್ನ ಇಮಾಅಲ್ಲಾಹ್ ಮಹಿಳೆಯರ ಗುಂಪು ಮಸೀದಿಯ ನಿರ್ಮಾಣದಲ್ಲಿ ಬಹುದೊಡ್ಡ ಪಾಲು ನೀಡಿದೆ.

Zion Township ಮೇಲುಸ್ತುವಾರಿ ವಹಿಸಿದ್ದ ಆಜಡುಟಿಜಚಿಟ ಹೇಳಿಕೆ ಪ್ರಕಾರ ಒಂದು ಸಮಯವಿತ್ತು. Zion ನ ನಗರದ ಕೆಲವು ಜನರಿಗೆ ಈ ಭಯವಿತ್ತು. ಮುಸಲ್ಮಾನರು ಈ ಮುಬಾಹಲ ಕಾರಣದಿಂದ ನಗರ ಮೇಲೆ ಪ್ರಭುತ್ವ ಬಯಸುತ್ತಾರೆ. ಅವಳು ಹೇಳುವುದು ಇಂದು ಮುಬಾಹಲದ ಆ ಘಟನೆ ಚಿರಪರಿಚಿತ ಇಲ್ಲವಾಗಿದೆ. ಆದರೆ ಅಹ್ಮದಿಯಾ ಮುಸ್ಲಿಂ ಜಮಾಅತ್ ಚಿರಪರಿಚಿತ ಹೊಂದಿದೆ. ಹೇಳುತ್ತಾರೆ. ನೀವು ಅವರ ಹೃದಯವನ್ನು ಬಲ್ಲವರಾದರೆ ತಿಳಿದೀತು. ಅವರು ಆಕ್ರಮಣದ ಉದ್ದೇಶ ಹೊಂದಿರಲಿಲ್ಲ. ಬದಲು ಇಲ್ಲಿಯ ಜನರ ಸೇವೆ ಮಾಡುವ ಉದ್ದೇಶ ಅವರದ್ದಾಗಿತ್ತು.

**3 ಅಕ್ಟೋಬರ್ 2022 ಸೋಮವಾರ**

ಹುಝೂರೆ ಅನ್ವರ್(ಅತಬಿಅ) ಮುಂಜಾನೆ 6.10 ಗಂಟೆಗೆ ಮಸ್ಜಿದ್ ಬೈತುಲ್ ಇಕ್ರಾಮ್ ಡಲ್ಲಸನಲ್ಲಿ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಹುಝೂರ್ ತಮ್ಮ ವಸತಿಯತ್ತ ತೆರಳಿದರು.

ಮುಂಜಾನೆ ಹುಝೂರೆ ಅನ್ವರ್(ಅತಬಿಅ) ಅಂಚೆಗಳನ್ನು ಪರಿಶೀಲಿಸಿದರು. ವಿವಿಧ ದೇಶಗಳಿಂದ ಬಂದ Faxes, ಇಮೇಲ್, ಮತ್ತು ವರದಿಗಳನ್ನು ಪರಿಶೀಲಿಸಿದರು. ನಂತರ ನಿರ್ದೇಶನಗಳನ್ನು ನೀಡಿದರು. ಇಲ್ಲಿ ಅಮೇರಿಕಾದಿಂದಲೂ ದಿನಾಲೂ ಜಮಾಅತ್ ಬಾಂಧವರ ಪತ್ರಗಳು ಬರುತ್ತವೆ. ಹುಝೂರೆ ಅನ್ವರ್(ಅತಬಿಅ) ಈ ಪತ್ರಗಳು ಸಹ ಪರಿಶೀಲಿಸುತ್ತಾರೆ ಮತ್ತು ಉತ್ತರಿಸುತ್ತಾರೆ.

**(ಮುಂದುವರಿಯುವುದು)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." **(ಅರ್‌ಬಈನ್ ನಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)**

**ಸದರ್ ಅಂಜುಮನ್ ಅಹ್ಮದಿಯಾ**
**ಖಾದಿಯಾನ್‌ನ ಸಂಸ್ಥೆಗಳಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು**

**ದಾರುಸ್ಸನಾತ್ ಖಾದಿಯಾನ್‌ನಲ್ಲಿ AC & Refrigerator ನ ಅಧ್ಯಾಪಕದ ಬಗ್ಗೆ ಜಾಹೀರಾತು**

**ಷರತ್ತುಗಳು:**

(1) ಅಭ್ಯರ್ಥಿಯ ಶಿಕ್ಷಣವು **Air Conditioning & Refregeration Engineering**ನಲ್ಲಿ ಪದವಿ/ಡಿಪ್ಲೊಮಾ ಆಗಿರಬೇಕು ಅಥವಾ ಸರ್ಕಾರದ ಅಧಿಕೃತ ಸಂಸ್ಥೆಯಿಂದ ತತ್ಸಮಾನವಾಗಿರಬೇಕು ಮತ್ತು ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ 6 ತಿಂಗಳ ಅನುಭವವನ್ನು ಪಡೆದಿರಬೇಕು.

(2) ಅಭ್ಯರ್ಥಿಗೆ ಉರ್ದು, ಹಿಂದಿ ಭಾಷೆಯಲ್ಲಿ ಸಂಬಂಧಿತ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸುವ ಸಾಮರ್ಥ್ಯವನ್ನು ಹೊಂದಿರಬೇಕು ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಬೇಕು.

(3) ಬದರ್ ವಾರಪತ್ರಿಕೆಯಲ್ಲಿ ಪ್ರಕಟವಾದ ಕೊನೆಯ ಪ್ರಕಟದ ನಂತರ 2 ತಿಂಗಳೊಳಗೆ ಸ್ವೀಕರಿಸಲಾಗುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

(4) ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ರವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ.

(5) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ.

(6) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516
ಮೊಬೈಲ್: 09646351280, 09682587713,
ಕಛೇರಿ: 01872–501130
ಈ–ಮೇಲ್: diwan@qadian.in

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 01 February 2024, Issue No. 05

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-50ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹುಝೂರೆ ಅನ್ವರ್(ಅತಬಿಅ) ಅವರ ಈ Zion ಪ್ರವಾಸ ಮತ್ತು ಫತಹ ಅಝೀಮ್ ಕುರಿತು ಒಂದು ನಿಬಂಧ ಪ್ರಕಟಿಸಿತು. ಅದರ ಶೀರ್ಷಿಕೆ "To prophets, century old prayer duel inspire zion mosque" ಎಂದರೆ "ಎರಡು ಪ್ರವಾದಿಗಳ ಮಧ್ಯೆ ಶತಮಾನಗಳಷ್ಟು ಹಳೆಯ ಮುಬಾಹಲ, ಜಿಯಾನ್ ಮಸೀದಿಯ ಮುನ್ನುಡಿಯಾಗಿದೆ.

ಈ ಸುದ್ದಿ ಮಾಧ್ಯಮದ website ಅನ್ವಯ ಸುಮಾರು ಪ್ರಪಂಚದ ಅರ್ಧದಷ್ಟು ಜನಸಂಖ್ಯೆ ಇದರ ಓದುಗರರಾಗಿದ್ದಾರೆ.

ಇದಾದ ನಂತರ ಈ ನಿಂಬಂಧ ಒಟ್ಟು ಲೋಕದ 13 ರಾಷ್ಟ್ರಗಳ 412 Outlets ಮತ್ತು ವಾರ್ತಾ ಪತ್ರಿಕೆಗಳಲ್ಲಿ ಸೇರಿತು, ಅದರಲ್ಲಿ ಈ ಪ್ರಬಂಧ (Wasington post) ABC New ಟೋರಂಟೊ ಸ್ಟಾರ್, The Hill ಮತ್ತು ಇತರ ಹಲವು ಪ್ರಸಿದ್ಧ ಪತ್ರಿಕೆಗಳಾಗಿವೆ. ಈ Associated press ನ ಹತ್ತು Top ಪ್ರಸಿದ್ಧ ಪ್ರಬಂಧಗಳಲ್ಲಿ ಒಂದಾಗಿತ್ತು.

ಈ ಪ್ರಬಂಧದಲ್ಲಿ ಹೇಳಲಾಗಿದೆ. "Zion ನಲ್ಲಿ 115 ವರ್ಷಗಳ ಹಿಂದೆ ಒಂದು ಪವಿತ್ರವಾದ ಪವಾಡ ಜರುಗಿತ್ತು. ಲೋಕದ ಲಕ್ಷಾಂತರ ಅಹ್ಮದಿ ಮುಸಲ್ಮಾನರು ಇದರ ಮೇಲೆ ವಿಶ್ವಾಸ ಹೊಂದಿರುತ್ತಾರೆ. ಅಹ್ಮದಿಯರು ಈ ಸಣ್ಣದಾದ ನಗರ ಅದು ಶಿಕಾಗೋದಿಂದ 40 ಮೈಲಿಯಷ್ಟು ದೂರದಲ್ಲಿ ಉತ್ತರದಲ್ಲಿ ಒಝಿಗಿಂಚಿಟ ಸರೋವರದ ದಂಡೆಯ ಮೇಲಿದೆ. ಧಾರ್ಮಿಕ ನೆಲೆಯಲ್ಲಿ ಇದಕ್ಕೆ ತುಂಬಾ ಮಹತ್ವ ನೀಡುತ್ತಾರೆ.

ಈ ನಗರದೊಂದಿಗೆ ಅಹ್ಮದಿ ಜಮಾಅತಿನ ಸಂಬಂಧ ಒಂದು ಶತಮಾನದಷ್ಟು ಹಿಂದೆ ಮುಬಾಹಲ ಮತ್ತು ಒಂದು ಭವಿಷ್ಯವಾಣಿಯಿಂದ ಪ್ರಾರಂಭವಾಗಿತ್ತು.

ಜಿಯಾನ್ ನಗರ ಅಡಿಪಾಯು 1900 ರಲ್ಲಿ ಓರ್ವ ಮಸೀಹಿ ಥಿಯೊಕ್ರಿಸಿಯ ನೆಲೆಯಲ್ಲಿ ಜಾನ್ ಅಲೆಕ್ಸಾಂಡರ್ ಡೂಯಿ ಇಟ್ಟಿದ್ದರು. ಅವರು ಒಬ್ಬ Evange list ಆಗಿದ್ದರು. ಅವರು ಪ್ರಾರಂಭಿಕ Pentecostal ಪ್ರಚಾರಕರಾಗಿದ್ದರು. ಅಹ್ಮದಿಯರ ವಿಶ್ವಾಸವಿದೆ. ಅವರ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಡೂಯಿಯ ಇಸ್ಲಾಂ ಧರ್ಮದ ವಿರುದ್ಧ ಬಳಸಿದ ಅಪಶಬ್ಧಗಳ ಮತ್ತು ಪ್ರತಿವಾದಿಗಳ ರಕ್ಷಣೆಗಾಗಿ ಇಸ್ಲಾಂ ಧರ್ಮವನ್ನು ಪ್ರಸ್ತುತಪಡಿಸಿದರು. ಮತ್ತು ಕೇವಲ ಪ್ರಾರ್ಥನೆಗಳ ಆಯುಧಗಳನ್ನು ಬಳಸಿ ಈ ಆಧ್ಯಾತ್ಮಿಕ ಯುದ್ಧದಲ್ಲಿ ಅವರನ್ನು ಸೋಲಿಸಿದರು.

Zion ನಗರದ ಸುಮಾರು ಎಲ್ಲಾ ಈಗಿನ ಜನರಿಗೆ ಈ ಹಳೆಯ ಕಾಲದ ಪವಿತ್ರ ಯುದ್ಧದ ಬಗ್ಗೆ ತಿಳಿದವರಿಲ್ಲ. ಆದರೆ ಅಹ್ಮದಿಯರಿಗೆ ಅದು ಪವಿತ್ರ ಯುದ್ಧವಾಗಿದೆ. ಅದು ಈ ನಗರದೊಂದಿಗೆ ಒಂದು ಶಾಶ್ವತ ಸಂಬಂಧ ಹೊಂದುವಂತೆ ಮಾಡಿದೆ. ಲೋಕಾದ್ಯಂತದಿಂದ ಸಾವಿರಾರು ಅಹ್ಮದಿಯರು ಈ ಶತಮಾನದ ಹಳೆಯ ಪವಾಡವನ್ನು ನೆನಪಿಸಿಕೊಳ್ಳಲು ಮತ್ತು Zion ನಗರದ ಒಂದು ಐತಿಹಾಸಿಕ ಹಾಗೂ ತಮ್ಮ ವಿಶ್ವಾಸದ ಅಡಿಪಾಯವಾದ ನಗರದ ಈ ಪ್ರಥಮ ಅಹ್ಮದಿಯ ಮಸೀದಿಯ ಉದ್ಘಾಟನಾ ಸಮಾರಂಭವನ್ನು ಆಚರಿಸಲು ಇಲ್ಲಿ ನೆರೆದಿರುತ್ತಾರೆ.

ಡೂಯಿ 1847 ರಲ್ಲಿ ಸ್ಕಾಟ್‌ಲ್ಯಾಂಡ್‌ನಲ್ಲಿ ಜನಿಸಿದರು. ಅವರ ಕುಟುಂಬ 1860 ರಲಿ ಆಸ್ಟ್ರೇಲಿಯಾಕ್ಕೆ ಹೋಗಿತ್ತು. ಅಲ್ಲಿ ಅವರು ಚರ್ಚ್‌ನ ಪಾದರಿಯಾಗಿದ್ದರು.

ಡೂಯಿ 1888 ರಲ್ಲಿ ಆಸ್ಟ್ರೇಲಿಯಾ ಬಿಟ್ಟು ಅಮೇರಿಕಾ ಹೋದರು. ಅವರು ತಮ್ಮ ಆರೋಗ್ಯ ದೆಶೆಯಿಂದ ಪ್ರಸಿದ್ಧಿ ಪಡೆದಿದ್ದರು.

ಅವರು ತಮ್ಮ ಅನುಯಾಯಿಗಳ ಹಣಕಾಸನ್ನು ಬಳಸಿ ಒಂದು ಕ್ರಿಸ್ತ Utopia ಸ್ಥಾಪಿಸುವ ಭರವಸೆಯಲ್ಲಿ Lake country illinois ನಲ್ಲಿ 6000 ಎಕರೆ ಜಮೀನು ಖರೀದಿಸಿದರು. ಈ ನಗರದ ಕಾನೂನುಗಳು, ಜೂಜು, ಸಿನಿಮಾ, ಸರ್ಕಸ್, ಸರಾಯಿ (ಮದ್ಯ) ಮತ್ತು ತಂಬಾಕು ಸೇವನೆ ನಿಷಿದ್ಧವಾಗಿದ್ದವು. ಅವನು ಆಣೆ ಹಾಕಲು, ಉಗುಳಲು, ನೃತ್ಯ, ಹಂದಿ ಮಾಂಸ ತಿನ್ನುವುದು, Oster ಮತ್ತು Tan ಬಣ್ಣದ ಬೂಟುಗಳ ಮೇಲೆ ನಿಷೇಧ ಹೇರಿದನು. 1900 ರಲ್ಲಿ ನಿರ್ಮಿಸಿದ Shiloh Tabe nacle Zion ನ ಧಾರ್ಮಿಕ ಕೇಂದ್ರವಾಯಿತು.

ಇದು ಯಾವ ಸ್ಥಳವಾಗಿತ್ತೆಂದರೆ, ಇಲ್ಲಿ ಡೂಯಿ ತನ್ನ ಬೆಳೆಯುತ್ತಿರುವ ಬಿಳಿ ಗಡ್ಡದ ಜೊತೆಯಲ್ಲಿ Old Testament ನ ಒಂದು ಉನ್ನತ ಪದರಿಯ ಭವ್ಯ ಪ್ರಕಾಶಮಯ ವಸ್ತ್ರ ಧಾರಣೆ ಮಾಡಿ ಮುಂದಾದನು ಮತ್ತು ತನ್ನನ್ನು ತಾನು Elijah the Restore" ಎಂದು ವಾದಿಸಿದನು.

ಅವನು ಆಫ್ರಿಕನ್ ಅಮೇರಿಕಾದವರಿಗೆ Zion ನಂತರ ಹೋಗಲು ಅನುಮತಿ ನೀಡಿದನು. ಆದರೆ ಅವನು ರಾಜಕಾರಿಣಿಗಳಿಗೆ, ವೈದ್ಯರಿಗೆ ಮತ್ತು ಮುಸಲ್ಮಾನರಿಗೆ ಕಠಿಣ ಶಬ್ಧಗಳನ್ನು ಬಳಸಿದನು. ಅದು ಅವನ ಪತ್ರಿಕೆಯಿಂದ ವ್ಯಕ್ತವಾಗುತ್ತದೆ.

1902 ರಲ್ಲಿ ಡೂಯಿ ಬರೆದನು. ಪೂರ್ವದಿಂದ ಪಶ್ಚಿಮ, ಉತ್ತರದಿಂದ ದಕ್ಷಿಣದ ಜನರನ್ನು ಒಟ್ಟುಗೂಡಿಸುವುದು ನನ್ನ ಕೆಲಸವಾಗಿದೆ. ಈ ಕ್ರಿಸ್ತ ನಗರಿಯ ಜೊತೆ ಜೊತೆಯಲ್ಲಿ ಬೇರೆ ನಗರಗಳಲ್ಲೂ ಕ್ರಿಸ್ತರನ್ನು ಓಗ್ಗೂಡಿಸುವುದು ಸಹ ನನ್ನ ಕೆಲಸವಾಗಿದೆ. ಎಲ್ಲಿಯವರೆಗೆಂದರೆ ಮುಹಮ್ಮದಿ ಧರ್ಮ ಈ ಲೋಕದಿಂದ ಪರಿಪೂರ್ಣವಾಗಿ ಕೊನೆಗೊಳ್ಳಬೇಕು. ಆ ದಿನ ಬರಬೇಕಾಗಿದೆ. ಓ ಖುದಾ (ಪ್ರಭೂ) ನಮಗೆ ಆ ದಿನ ಕಾಣುವ ಭಾಗ್ಯ ದಯಪಾಲಿಸು."

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಅಧ್ಯಕ್ಷರು ತಾಹಿರ್ ಸೂಫಿ ಸಾಹಿಬ್ ಜಮಾಅತ್‌ನ ಈ ಹೊಸ ಮಸೀದಿಯ ನಿರ್ಮಾಣ ಕಂಡರು. ಡೂಯಿ ತಮ್ಮ ಇತಿಹಸದ ಒಂದು ಅಂಗವಾಗಿದ್ದಾರೆ. ಜಮಾಅತ್ ಈ ಮಸೀದಿಯ ಹೆಸರು "ಫತಹ್ ಅಝೀಮ್" ಎಂದು ಹೆಸರಿಸಿದೆ. ಅದರ ಆಂಗ್ಲ ಭಾಷೆಯ ಅರ್ಥ Great victory ಎಂದಾಗಿದೆ.

ಈ 40 ಲಕ್ಷ ಡಾಲರಿನ ಕಟ್ಟಡ ಅಹ್ಮದಿಯಾ ಜಮಾಅತ್‌ನ ಹಳೆಯ ಕೇಂದ್ರದ ಜಾಗದಿಂದ ಎರಡು ಮೈಲು ದೂರದಲ್ಲಿ ನಿರ್ಮಿಸಲಾಗಿದೆ. ಅಕ್ಟೋಬರ್‌ನಲ್ಲಿ ಉದ್ಘಾಟನೆಗೊಳ್ಳುವ ಈ ಹೊಸ ಜಾಗ ನಿರ್ಮಾಣಕ್ಕಾಗಿ ಜಮಾಅತಿನ ಅಧ್ಯಕ್ಷರು ತಾಹಿರ್ ಸೂಫಿ ಸಾಹಿಬ್ ಅಹ್ಮದಿಯ ಸಮುದಾಯದವರಿಗೆ ಶತಮಾನಗಳ ಹಿಂದೆ ಗತಿಸಿದ ಘಟನೆಗಳನ್ನು ತಿಳಿಸಿದ್ದರು. ಜಮಾಅತಿನ ಸ್ಥಾಪಕರು ಇಂಡಿಯಾಕ್ಕೆ ಸಂಬಂಧಿಸಿದವರಾಗಿದ್ದರು. ಅವರು ಡೂಯಿಯನ್ನು ಇಸ್ಲಾಂ ಧರ್ಮದ ವಿರುದ್ಧ ದ್ವೇಷದಿಂದ ತುಂಬಿದ ಪದಗಳನ್ನು ಆಲಿಸಿದಾಗ ಅವನನ್ನು ಅದರಿಂದ ದೂರವಿರಲು ತಾಕೀತು ಮಾಡಿದ್ದರು.

ಅಹ್ಮದಿಯರ ವಿಶ್ವಾಸ, ಅವರ ಸ್ಥಾಪಕರು 1835 ರಲ್ಲಿ ಜನಿಸಿದರು. ಅವರು ಓರ್ವ ಸುಧಾರಕರಾಗಿದದರು ಅವರ ಸುವಾರ್ತೆ ಇಸ್ಲಾಮಿನ ಸ್ಥಾಪಕರು ಮೊದಲೇ ತಿಳಿಸಿದ್ದರು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಹಝುರತ್ ಈಸಾ (ಅ) ರವರ ಸಾದೃಶ್ಯ ರೂಪವಾಗಿದ್ದಾರೆ ಎಂಬುದು ಸಹ ಅವರ ವಿಶ್ವಾಸವಾಗಿದೆ.

ಸೂಫಿ ಸಾಹಿಬ್ ಹೇಳಿದರು. ಡೂಯಿ ಅಹ್ಮದಿಯಾ ಜಮಾಅತಿನ ಸಂದೇಶವನ್ನು ಕಡೆಗಾಣಿಸಿದಾಗ 1902 ರಲ್ಲಿ ಅವರು (ಅ) Zion ನ

*(ಪುಟ ಸಂಖ್ಯೆ-10ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ**
**ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.